

ಸಂಪುಟ ೬ } ಏಪ್ರೀಲ್ ೧೯೪೭ { ಸಂಚಿಕೆ ೧

ಸರ್ವಜಿತು ಯುಗಾದಿಯಂದು ಕೊರವಂಜಿಯು ತನ್ನ ಆರನೆಯ ಹುಟ್ಟು ಹಬ್ಬವನ್ನಾಚರಿಸಿದಳು. ಪೂರ್ಣಸ್ವತಂತ್ರ ಬರುವತನಕ ಸಿಂಗಾರ ಸೊಬಗುಗಳನ್ನು ತೊಡುವುದಿಲ್ಲವೆಂದು ಮೊದಲೇ ಪಣ ತೊಟ್ಟಿದ್ದಳಲ್ಲವೇ? ಈಗ ನಮ್ಮ ನಾಡು ಸ್ವತಂತ್ರವಾಗಲಿರುವುದು. ಆ ವೇಳೆಗೆ ಅಂದಚಂದದ ಉಡಿಗೆ ತೊಡಿಗೆಗಳನ್ನು ತೊಟ್ಟು ಓದುಗರ ಮನಸ್ಸನ್ನು ನಗುಮುಖವನ್ನಾಗಿಸುವಳು. ಅಲ್ಲಿನತನಕ ಈ ಬಿಚ್ಚೋಲೆ ಗೌರಮ್ಮನ ಉಡುಪೇ ಅವಳಿಗೆ ಪ್ರಿಯ ಹಾಗೂ ಸಾಧ್ಯ.

ಇಷ್ಟು ದಿನವೂ ಕೊರವಂಜಿಯನ್ನು ಕಾಪಾಡಿಕೊಂಡು ಬಂದ ಓದುಗರೂ, ಸಹೃದಯ ವಿಮರ್ಶಕರೂ, ಜಾಹೀರಾತುದಾರರೂ ಮುಖ್ಯ ಕನ್ನಡಿಗರೂ, ಹಾಗೂ ವ್ಯಾಪಾರಿಗಳು, ಸರ್ವಜಿತು ಸಂವತ್ಸರದಲ್ಲಿ ಸರ್ವ ಕಷ್ಟಗಳನ್ನೂ ಜಯಿಸಿಕೊಂಡು ಸುಖ ಶಾಂತಿಯಿಂದಿರಲೆಂದು ಮನದಣಿಯ ಹಾರೈಸುತ್ತೇವೆ

ಹಾಸ್ಯಮುಖಿ ಕನ್ನಡಮ್ಮನ ಬೆಳೆವಣಿಗೆ ಚೆನ್ನಾಗಿಯೇ ಸಾಗುತ್ತಿದೆ. ಕಳೆದ ಸಾಹಿತ್ಯ ಸಮ್ಮೇಳನಾಧ್ಯಕ್ಷರು, ನಗುಮುಖದ ಸಾಹಿತ್ಯದಲ್ಲಿ ಕ್ರಾಂತಿಕಾರರಾಗಿ ಮೊದಲಿಗರೆನಿಸಿದ್ದವರು. ಈ ಬಾರಿ ಸಾಹಿತ್ಯ ಸಮ್ಮೇಳನಾಧ್ಯಕ್ಷರೂ ಕೂಡ ಹಾಸ್ಯಹಿನ್ನೆಲೆಯಾಗಿಸಿಕೊಂಡ ಸಾಹಿತಿಗಳು. ಕೊರವಂಜಿಗೆ ಇದೊಂದು ಜಂಭ. ನಮ್ಮವರೇ ಈ ಬಾರಿಯೂ ಅಧ್ಯಕ್ಷರಾಗಿ ಆಯ್ಕೆ ಆದರೆಂದು—ಶ್ರೀ ಸಿ. ಕೆ. ವೆಂಕಟರಾಮಯ್ಯನವರನ್ನು ಅಭಿನಂದಿಸುವ ಮೂಲಕ, ತಾನೂ ಹೆಮ್ಮೆಪಡುತ್ತಾಳೆಂಬುದನ್ನು ಶ್ರೀಯುತರಿಗೆ ತಿಳಿಸಬಯಸುತ್ತೇವೆ.

ಸಕಲರಿಗೂ ಸನ್ಮಂಗಳವುಂಟಾಗಲಿ.

ಕುಹಕಿಡಿಗಳು

ಆಚಾರ್ಯ ಕೃಪಲಾನಿಗಳು 'ಭಾಷಾವಾರು' ಸಮಸ್ಯೆಯೇ ಅರ್ಥ ವಾಗಲಿಲ್ಲ ಎಂದರಂತೆ—

—ಆದರೂ ಪ್ರಕಾಶಂ ಆತ್ಮಗತಂ ಆಗಿಹೋಯಿತು—

* * * *

ಅಖಿಲ ಏಷ್ಯಾ ಸಂಸ್ಕೃತಿ ಸಮ್ಮೇಳನಕ್ಕೆ – ಮುಸ್ಲಿಂ ಲೀಗಿನವರು ಬಹಿಷ್ಕಾರ ಹಾಕಿದ್ದಾರಂತೆ—

—ಏನಾಶ್ಚರ್ಯ?– ಅವರು ಬೇರೆ - ಬೇರೆ - ಜನಾಂಗವಲ್ಲವೇ— ಯೂರೋಪು ಜನಾಂಗದ ಸಂಬಂಧೀಕರಲ್ಲವೇ ?

* * * *

ರಾಷ್ಟ್ರಪತಿ ಕೃಪಲಾನಿಗೆ ಪೌರಸಭೆಯವರು ಸತ್ಕಾರ ಕೂಟ ಏರ್ಪಡಿಸಿದಾಗ, ಅಧಿಕಾರಿ ಅಧ್ಯಕ್ಷರು ಗೈರುಹಾಜರು ಎಂಬ ಕೂಗೆದ್ದಿತಂತೆ—

—ಛೇ! ಛೇ! ಅವರಿಗೆ ಮೈ ಮನಸ್ಸು ಸ್ವಸ್ಥವಿರಲಿಲ್ಲವೇನೋ? ಅದಕ್ಕೇಕೆ ಇಷ್ಟು ಗಲಾಟೆ!

* * * *

ಪ್ರಧಾನಾಮಾತ್ಯರು ಹಿಂತಿರುಗಿ ಬರುವಾಗ ಆಫ್ರಿಕಾದಲ್ಲಿ ಪ್ರತಿನಿಧಿಗಳ ಬಂಗಲೆಯಲ್ಲಿ ಒಂದೆರಡು ದಿನಗಳಿದ್ದು, ಅಲ್ಲಿನ ಚಲನ ವಲನಗಳನ್ನು ನೋಡಿಕೊಂಡು ಬರುತ್ತಾರೆಂಬುದು ಖಚಿತವಲ್ಲವಂತೆ.

* * * *

ಪ್ರೆಸಿಡೆಂಟ್ ಟ್ರೂಮನ್ನರು ಗ್ರೀಸಿಗೆ ಆರ್ಥಿಕ ಸಹಾಯ ವಾಗ್ದಾನ ಮಾಡಿರುವುದಕ್ಕೂ – ಗ್ರೀಸಿನ ರಾಜಪುತ್ರ ಜಾರ್ಜರು ಇಂಗ್ಲೆಂಢಿನ ರಾಜಕನ್ಯೆ ಎಲಿಜಬೆತ್ತಳನ್ನು ಮದುವೆಯಾಗುವುದಕ್ಕೂ—ಸಂಬಂಧವಿಲ್ಲವಂತೆ.

* * * *

ಉರಿಗಾಳು

—o—

ಫ್ರಾನ್ಸ್ ದೇಶದ ಪಾರ್ಲಿಮೆಂಟ್ ಸಭೆಯಲ್ಲಿ, ಮಹಿಳಾ ಸದಸ್ಯೆ ಒಬ್ಬರು ಮತ್ತೊಬ್ಬ ಸದಸ್ಯರ ಕೆನ್ನೆಗೆ ಬಿಸಿಬಿಸಿಯಾಗಿ ಹೊಡೆದರು (ವಾರ್ತೆ)....ಇದಕ್ಕೇ, ಮಹಿಳಾ ಸದಸ್ಯೆಯರಿರಬೇಕೆನ್ನುವುದು ಪ್ರತಿನಿಧಿಸಭೆಗಳಲ್ಲಿ.

* * *

ಕನ್ನಡ ಕೃಷ್ಣಲೀಲಾ ಚಿತ್ರದ "ವಿಷ್ಣು" ಪಾತ್ರವನ್ನು ಶೈವರೆಲ್ಲರೂ ತುಂಬಾ ಮೆಚ್ಚುತ್ತಿರುವರಂತೆ.

* * *

"ಅಲ್ಪಸಂಖ್ಯಾತರಾದ ಮುಸ್ಲಿಮರು, ಬಹು ಸಂಖ್ಯಾತರಾದ ಇತರೇ ಜನರಿಗೆ ಹೆದರಬೇಕಾಗಿಯೇ ಇಲ್ಲ"........ಈ ಮಾತನ್ನು ಬಂಗಾಳಾ ಮಂತ್ರಿಗಳೊಬ್ಬರು "ಹೈದರಾಬಾದ್ ಸಂಸ್ಥಾನ"ವಲ್ಲಿ ಹೇಳಿದರು.

* * *

ಆರ್ಕಾಟ್ ಜಿಲ್ಲೆಯ ಸಾದುವಲೆ ಗ್ರಾಮದ ವಿನಾಯಗಂ ಎಂಬ ರೈತನ ಗುಡಿಸಿಲೊಳಕ್ಕೆ ಮದ್ರಾಸ್ ಗವರ್ನರರವರು ನುಗ್ಗಿ ಆತನ ಹೆಂಡತಿ ಕೊಟ್ಟ ಎರಡು ಇಡ್ಲಿಗಳನ್ನು ತಿಂದು ಅದನ್ನು ಕೊಂಡಾಡಿದರು (ವಾರ್ತೆ)....ಆದರೂ, ಅವರು 1948 ಜೂನ್‌ನಲ್ಲಿ ಸ್ವದೇಶಕ್ಕೆ ಹಿಂತಿರುಗುತ್ತಾರಂತೆ.

* * *

ಜಪಾನಿನಲ್ಲಿ ತಯಾರಾದ 5 ಕೋಟಿ ಚದರ ಗಜ ಬಟ್ಟೆಯನ್ನು ಅಮೇರಿಕನ್ನರಿಂದ ಕೊಂಡುಕೊಂಡು ಇಂಗ್ಲೀಷಿನವರು ಮಡಿ ಮಾಡಿ ಇಂಡಿಯಾದೇಶಕ್ಕೆ ಮಾರುತ್ತಾರೆ. (ವಾರ್ತೆ)........ಅದುವರೆಗೂ ನಾವು ಮಡಿ ಉಟ್ಟುಕೊಳ್ಳದೆ ಕೂತಿದ್ದರೆ, ತಾನೆ ?

* * *

ಬ್ಲೂಂಫೊನ್‌ಟೇನ್ ಮೃಗಾಲಯದಲ್ಲಿ ಚಕ್ರವರ್ತಿ ದಂಪತಿಗಳು, ಆಫ್ರಿಕಾ ದೇಶದ ಸಿಂಹಕ್ಕೂ ಇಂಡಿಯಾದೇಶದ ಹುಲಿಗೂ ಜನಿಸಿದ ಮೂರು ಲೈಗರ (ಹುಂಹ) ಮರಿಗಳನ್ನು ನೋಡಿ ಸಂತೋಷಿಸಿದರು....ಈ ಮರಿಗಳನ್ನು ಅಂತ

ರ್ರಾಷ್ಟ್ರೀಯ ಸಂಘದ ಮುಂದಿನ ಅಧಿವೇಶನಕ್ಕೆ ತೆಗೆದುಕೊಂಡು ಹೋಗಿ, ಆಫ್ರಿಕಾ-ಇಂಡಿಯಾ ಸಾಮರಸ್ಯದ ಉದಾಹರಣೆಯಾಗಿ ಸ್ಮಟ್ಸ್‌ರವರು ಪ್ರದರ್ಶಿಸುವರಂತೆ.

* * *

"ಪಾಕಿಸ್ತಾನ್ ಪ್ರಾಂತಗಳಲ್ಲಿರುವ ಇತರ ಮತೀಯರನ್ನು ನಾವು ಹೇಗೆ ಆಳುತ್ತೇವೆ ಎಂಬುದನ್ನು ಖಚಿತವಾಗಿ ವಿವರಿಸಬೇಕಾಗಿಯೇ ಇಲ್ಲ" (ಭಾಷಣ) ....ಅವರು ತಾವೇ ತಿಳಿದುಕೊಳ್ಳಬಲ್ಲರು.

* * *

ಬೋರೇಗೌಡ ಎಂಬ ಹೆಸರಿನವರೆಲ್ಲ ಒಂದು ಸಂಘವನ್ನು ಸ್ಥಾಪಿಸಿಕೊಂಡು, ಇನ್ನುಮುಂದೆ ಕನ್ನಡ ಭಾಷಣಕಾರರು ಯಾರೂ "ಬಡ ಬೋರೇಗೌಡ" ಎಂಬ ಪದವನ್ನುಪಯೋಗಿಸಕೂಡದು ಎಂದು ಠರಾವು ಮಾಡುವರಂತೆ.

* * *

"ಲೀವಾದೇವಿ" ಎಂಬ ಕನ್ನಡ ವಾಕ್ಚಿತ್ರವೊಂದನ್ನು ತೆಗೆಯಲು ಕಥೆ, ಪಾತ್ರವರ್ಗ, ಹಸೆ, ಹಾಡು, ಎಲ್ಲವೂ ಸಿದ್ಧವಾಗಿರುವುದು ಸರಿಯಷ್ಟೆ....ಆದರೆ, ಚಿತ್ರ ತಯಾರಿಕೆಗೆ ಅನಿರೀಕ್ಷಿತ ತಡೆಗಳು ಬಂದಿವೆಯೆಂದು ನಂಬಲನರ್ಹವಾದ ಕಡೆಗಳಿಂದ ತಿಳಿದು ಬಂದಿದೆ.

* * *


ಅಧ್ಯಕ್ಷ ಟ್ರೂಮನ್‌ರವರ ಖಾಸಾ ವಿಮಾನಕ್ಕೆ ಅವರು ಕಾಮಧೇನು (Sacred Cow) ಎಂದು ಹೆಸರಿಟ್ಟಿರುವರಂತೆ.... ...ಗ್ರೀಸ್ ಮತ್ತು ಟರ್ಕಿ ದೇಶಗಳು ಆ ಹೆಸರು ತುಂಬ ಚೆನ್ನಾಗಿ ಹೊಂದುತ್ತದೆ ಎನ್ನುತ್ತವೆ. ಜಾನ್ ಬುಲ್‌ಗೂ ಅದೇ ಅಭಿಪ್ರಾಯವೇ ಇರಬೇಕು.

* * *

"ಯುಗಾದಿ ಪ್ರಯುಕ್ತ ಸಂಸಾರವೊಂದಕ್ಕೆ $1\frac{1}{2}$, ಅಥವಾ 3 ಸೇರು ಅಕ್ಕಿಯನ್ನು ಹೆಚ್ಚಿಗೆ ಕೊಡಲಾಯಿತು" ಆದರೆ, ಅದನ್ನು ಬೇಯಿಸಲು ಬೆಂಗಳೂರಿನವರಿಗೆ ಸೌದೆಯೇ ದೊರೆಯಲಿಲ್ಲ........ ಹಬ್ಬಕ್ಕೆ, ಅಕ್ಕಿಕಾಳನ್ನೇ ಬಾಯಿಗೆ ಹಾಕಿ.................... .

* * * *

———o———



ಬುಲ್‌ಡಾಗಿನ ಬಡಾಯಿಗೆಲ್ಲಾ ಬತ್ತಿ ಹಚ್ಚಿಟ್ಟ ಅಟ್ಲಿ

ಹೊಸ ವೈಸ್ರಾಯರಿಗೆ

ನಾವು ಮಾಡಿದ ಕರ್ಮ ಬಲವಂತವಾದರೆ
ನೀ ಮಾಡುವುದೇನೋ, ಲೂಯಿ ॥ ಪ ॥

ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹ
ಕೋಮುಕಂಟಕವೆಮ್ಮ ಮನದಲ್ಲಿ ಇಹುದಕೆ ॥ ಅ ಪ ॥

ಹಿತವಚನಕೆ ಕರ್ಣ ಕೊಟ್ಟವರಲ್ಲ, ಪರ
ಮತಿಯರ ಸಂಗ ಗಳಿಸಿ ಗೆದ್ದವರಲ್ಲ ॥

ಮತಿಹೀನರಾಗಿ ಮರುಳಾಗಿದೆವೋ, ನೋಡು,
ಗತಿಯಾವುದೈ ಎಮಗೆ, ಸಿಯಕನಾಯಕ, ಲೂಯಿ ॥

ಮೋಹಮದಗಳಲಿ ನಾವಗ್ರಗಣ್ಯರು ಆಗಿ
ಸ್ನೇಹ, ಕರುಣೆ, ಸತ್ಯ, ಧರ್ಮಗಳನೆ ನೀಗಿ ॥

ಲೋಕರಕ್ಷಕನನ್ನ ಧ್ಯಾನವ ಮಾಡದೆ
ಬಾಕು ಬೆಂಕಿಗಳಿಂದ ಶೋಕದಲದ್ದಿ ॥

ಮುಂದಾದರು ನಮಗೆ ಸೋದರ ಸಂಗ ಬಂದು
ಹಿಂದಕೆ ದಯಮಾಡೊ, ಮೌಂಟಬಾಟನ ಲೂಯಿ ॥

ಅನ್ಯದೇಶದವರೆಲ್ಲ ಆದರಿಸುವರೆಮ್ಮ
ಜಿನ್ನರೊಬ್ಬರು ಮಾತ್ರ ಇಂಡ್ಯನಲ್ಲೆಂಬರು ॥

—ರುದ್ರಮ್ಮ.

ವಹನ್ವಾ ! ವಹಬ್ಬಾ !!

ಆಹಾ ! ಎಷ್ಟು ಚೆನ್ನಾಗಿತ್ತು ಅಂತೀರಿ ಆ ತೋಟ ! ಒಂದು ಕಡೆ ಒಂದೇ ವಯಸ್ಸಿನ ಎಳೆ ಬೆಳೆಗಳು. ಮುದ್ದು ಮುದ್ದಾಗಿ ಬೆಳೆದಿದ್ದುವು. ಕಾಮನ ಹುಣ್ಣಿಮೆಯ ಬೆಳದಿಂಗಳಿನಲ್ಲಿ ತೆನೆಹಾರಿಸಿಕೊಂಡು ವಾಲಾಡುತ್ತಿದ್ದರೆ 'ಇದೇನು ಈ ಪೈರು ಕೂಡ ಕಾಮನ ಹಬ್ಬದ ದುಂದುಭಿ ಕುಣಿತ ಆಡುತ್ತಿದೆಯೋ' ಎನ್ನಿಸುತ್ತಿತ್ತು. ಇನ್ನೊಂದು ಕಡೆ ಹಚ್ಚ ಹಸುರು ಒಡಲಿನ ಪೈರು ಗಾಳಿಯೊಂದಿಗೆ ವಿಹರಿಸುತ್ತಿತ್ತು ಇನ್ನೊಂದು ಕಡೆ ಇನ್ನೂ ಸ್ವಲ್ಪ ಹೆಚ್ಚು ಬಲಿತ ಬೆಳೆ. ತೆನೆ ಭಾರವಾಗಿ ಇನ್ನೊಂದರ ಭುಜದ ಮೇಲೆ ವಾಲಿಕೊಂಡು ನಿಂತಂತೆ ಕಾಣುತ್ತಿತ್ತು. ಭಾವೀ ಜನಾಂಗಕ್ಕೇ ಅನ್ನಕೊಡುವ ಚಿಹ್ನೆ ಕಣ್ಣಿಗಿಂಪಿನ ಬಣ್ಣ, ಮನ ಮೋಹಕ ಮುಗುಳ್ನಗೆಯಾಟ, ಮುಖ್ಯ ನೋಡಲು ಪುಣ್ಯಮಾಡಿದ್ದಿರಬೇಕು ಎನ್ನಿಸಿತು.

ಕೂಡಲೇ ಒಂದು ಯೋಚನೆಯು ಬಂತು. ಇಷ್ಟು ಮುದ್ದಾದ ಎಳೆಬೆಳೆಗಳು ಕೃತ್ರಿಮವನ್ನರಿಯದ ಕೂಸುಗಳು, ಯಾರು ಹೇಗೆ ಹಾಡಿದರೆ ಹಾಗೆ ಕುಣಿಯುವ ಮನೋಭಾವ. ಇಂತಹವು ತಾವೇ ತಾವಾಗಿ ಬೆಳೆಯಲು ಅವಕಾಶವಿರಬೇಕು. ಹೊರಗಿನಿಂದ ಹದ್ದು ಹಲ್ಲಿ, ದನ ಮೇಕೆಗಳು, ಕಳ್ಳ ಪಿಳ್ಳೆ, ಯಾರೂ ಬಂದು ತೋಟ ಹಾಳುಮಾಡಬಾರದು. ಅದಕ್ಕೆ ಏನಾದರೂ ಏರ್ಪಾಡು ಮಾಡಿದ್ದಾರೆಯೇ? ಎಂದು ನೋಡಿದೆ

ಆಹಾ ! ತೋಟ ಬೆಳೆಸಿದವರು ಪೆಚ್ಚರಲ್ಲ. ಸುತ್ತಲೂ ಮುಳ್ಳಿನ ಬೇಲಿಯೊಂದನ್ನು ಹಾಕಿದ್ದಾರೆ. ಅದನ್ನೂ ಹಾದು ಬರುವ ಕೆಚ್ಚು ಯಾವ ಕಳ್ಳನಿಗೂ ಸಾಮಾನ್ಯ ಇರುವುದಿಲ್ಲ. ಅದನ್ನು ದಾಟಿ ಬಂದು ತೋಟ ಮೇಯುವಂತಹ ದನ ಮೇಕೆಗಳೇನೂ ಇರಲಾರದು ಎಂದು ತೋರಿತು. ಸದ್ಯ ! ತೋಟದಲ್ಲಿನ ಶಿಶು ಸಸಿಗಳಿಲ್ಲಾ ಸಹಜವಾಗಿ ಬೆಳೆಯಲು ಇದಕ್ಕಿಂತಲೂ ಇನ್ನೇನು ಬೇಕು ಎಂದು ಅನ್ನಿಸಿತು.

ಆದರೆ ನೋಡಿ ಕಾಮನ ಹಬ್ಬದ ದಿನ, ಊರಿನವರೆಲ್ಲಾ ಕಾಮಣ್ಣನನ್ನು ಕಟ್ಟಿಗೆ ಬೆರಣಿ ಜತೆಗೂಡಿಸಿ ಸುಡುವ ಸಂಪ್ರದಾಯ. ಬೋಲಬೋಲ ಪಲ್ಲವಿ ಹಾಡುವ ವಾಡಿಕೆ. ಇಂತಹ ದಿನ ಬೋಲಬೋಲದ ಪ್ರಸಂಗವೇ ಬರಲಿಲ್ಲ.

ಶಿಸ್ತು, ಸೌಜನ್ಯ ಸುಖದಿಂದ ಕೂಡಿದ ಎಳೆದೋಟ ಕಾಣಿಸಿತು. ಕಾವಲಿಗಾಗಿ ತಕ್ಕಮಟ್ಟಿಗೆ ಗಡುತರವಾದ ಬೇಲಿ ಬೇರೆ ಇದೆ. ಹೀಗೆಲ್ಲಾ ಮನಸ್ಸಿನಲ್ಲಿ ಬಂತು—

ಅಷ್ಟು ಹೊತ್ತಿಗೆ ಒಂದು ಧ್ವನಿ ಹೊರಬಿತ್ತು –

"ಎಲೈ ಎಳೆಯ ಸಸಿಗಳಾ – ತಾಯಿ ಮಲ್ಲಿಗೆಗಿಂತ ನಾವು ಚೆನ್ನಾಗಿ ಬೆಳೆಯ ಬೇಕು. ಘಮಘಮಿಸಬೇಕು ಎಂದು ನೀವು ಹಿರಿಯಾಸೆ ಪಡೆದಿದ್ದೀರಿ – ಕಂಡ ಸಂಪಿಗೆಗಿಂತ ರಂಗು ಬಳಿದು ಮೆರೆಯಬೇಕು ಎಂದು ಹಂಬಲಿಸುತ್ತಿದ್ದೀರಿ ; ತೆನೆ ಗೂಡಿ ಭಾರವಾಗಬೇಕೆನ್ನುತ್ತೀರಿ, ಆದರೆ ಇದರಲ್ಲೇನು ಪ್ರೌಢಿಮೆ, ಇದರ ಲ್ಲೇನು ಪುರುಷಾರ್ಥ – ಇವೆಲ್ಲಾ ಸೇವಕ ಮನೋವೃತ್ತಿ. ಇನ್ನೊಬ್ಬ ಮಾನ ವನ ಸುಖಕ್ಕೆ ! ಅವನ ಹೊಟ್ಟೆ ತುಂಬಲಿಕ್ಕೆ ! ಇದೇ ನಿಮ್ಮ ಜೀವನಾರ್ಥ— ಆದರೆ ನನ್ನನ್ನು ನೋಡಿ, ನಾನು ನಿಮ್ಮಗಳ ಮೇಲೆಲ್ಲಾ ಕಾವಲು ಕಾಯುವ ಸ್ಥಿತಿಯಲ್ಲಿದ್ದೇನೆ. ನನ್ನನ್ನು ಯಾರೂ ಮುಡಿಯಲಿಷ್ಟಪಡುವುದಿಲ್ಲ ಮೇಕೆಗಳು ಕೂಡ ನನ್ನನ್ನು ತಿನ್ನ ಬರುವುದಿಲ್ಲ. ನೀವೆಲ್ಲಾ ನನ್ನಂತೆಯೇ ಬೆಳೆಯಿರಿ. ಬೇಲಿಯಾಗಿ ಬಾಳಿರಿ. ಈ ಲೋಕದಲ್ಲಿ ಬೇಲಿ ಮತವೇ ಅತ್ಯುತ್ತಮ, ಮಿಕ್ಕ ಮತಗಳೆಲ್ಲವೂ ಅಸಹ್ಯ ಅಬಲ, ಅನ್ಯಾಯ, ಅ. ಅ....ಅ... ಇತ್ಯಾದಿ"—

ಅಯ್ಯೋ ಶಿಶು ಸಸಿಗಳಿಗೆ ಅವರ ಕುಲದಂತೆ ಬೆಳೆಯಲೂ ಅವಕಾಶವಿಲ್ಲವೇ, ಯಾರು ಹೀಗೆ ಉಪದೇಶ ಮಾಡುತ್ತಿರುವವರು ಎಂದು ತಿರುಗಿನೋಡಿದರೆ, ಕಾವಲಿಗೆ ಹಾಕಿದ ಬೇಲಿಯೇ ಎದ್ದು ಭಾಷಣಮಾಡುತ್ತಿದೆ—ಅರಿಯದ ಶಿಶು ಸಸಿಗಳಿಗೆ – ಎಲ್ಲರೂ ನನ್ನಂತೆಯೇ ಆಗಿ ಇನ್ನೊಬ್ಬರಿಗೆ ಪ್ರಯೋಜನವಿಲ್ಲ ದಂತೆ ಬಾಳುವುದೇ ಸೊಗಸು – ಅದೇ ನನ್ನ ಹಿರಿಮೆ—ಇತ್ಯಾದಿ.

ನನಗೋ ಮಾತೇ ಹೊರಡದು. ಕಾವಲಿಗಿಟ್ಟ ಬೇಲಿಯೇ ಎದ್ದು ಹೊಲ ಮೇಯಲಾರಂಭಿಸಿದರೆ, ತೋಟಗಾರನ ಪಾಡು ಹೊಲೆಯನ ಪಾಡಿಗಿಂತ ನಿಕೃಷ್ಟ – ಅಲ್ಲವೇ ? ಇನ್ನು ಸಸಿಗಳ ಪಾಡು ?— ಕೇಳುವವರೇ ಇಲ್ಲವೇ ?—

— ಅಷ್ಟರಲ್ಲೇ ಬೇಲಿಯ ಸುತ್ತಲಿನ ಮರಿ ಮುಳ್ಳು ಸಸಿಗಳೂ ಉಸಿರ ಹುಯ್ದುವು – ಗಾಳಿಯಲ್ಲಿ ಸೇರಿಕೊಂಡ ಅದೂ ಸುಯ್ಯನೆ ಕೇಳಿ ಬಂತು—

ವಹವ್ವಾ ! ವಹಬ್ಬಾ !! ವಹವ್ವಾ !!!

—— o ——

ಸಂಪಾದಕರಿಗೊಂದು ಪತ್ರ

ಸ್ವಾಮೀ :

ನಮಗೆಲ್ಲಾ ಹುಡ್ಗಿ ಸ್ಕೂಲಿನಲ್ಲಿರುವಾಗಲೆ ಕೆಳಕಾಣುವಂಥ ಲೆಖ್ಖಗಳನ್ನು ಕೊಟ್ಟು ನಮ್ಮ ಕೋಪವನ್ನು ಕೆದಕುವ ಮೇಷ್ಟ್ರುಗಳಿಗೇನು ಮಾಡಬೇಕು ? ಉದಾಹರಣೆಗೆ ;

ನಾಲ್ಕು ಗಂಡಸರೂ, ಎರಡು ಹೆಂಗಸರೂ, 10 ಹುಡುಗರೂ ಸೇರಿ ಒಂದು ಸೌದೆ ಡಿಪೋಗೆ ಕನ್ನ ಹಾಕಿ ಕೇವಲ 33 ನಿಮಿಷಗಳಲ್ಲಿ ಒಂದೂವರೆ ಟನ್ನಿನಷ್ಟು ಕಾಡು ಸೌದೆಯನ್ನೂ, ಹತ್ತೊಂಬತ್ತು ಮೂಟೆ ಚಿಲ್ಲರೆ ಇದ್ದಿಲನ್ನೂ ಸಾಗಿಸ ಬಲ್ಲರಾದರೆ, ಇದೇ ಕಸಬನ್ನು ಬರೀ ಆರು ಹುಡುಗರು ಮಾಡಲು ಎಷ್ಟು ಹೊತ್ತು ಬೇಕು? ಸೂಚನೆ :–ಒಬ್ಬ ಹೆಂಗಸು $2\frac{1}{2}$ ಗಂಡಸಿಗೆ ಸಮ ಮತ್ತು ಏಳು ಹುಡುಗರಿಗೆ ಎರಡು ಗಂಡಾಳು ಅಥವಾ ಒಂದು ಹೆಣ್ಣಾಳು ಸಮ

ಈರೀತಿ ನಮ್ಮ ಮಾನ ಹೋಗುವುದನ್ನು ಹೇಗಾದರೂ ನಿಲ್ಲಿಸಬೇಕು. ಈಚೀಚೆಗೆ ಈರೀತಿ ಲೆಖ್ಖಗಳು ಹಬ್ಬಿ, ಮೇಡಂಗಳೂ ಕೂಡ ಇಂಥ ಲೆಖ್ಖಗಳನ್ನು ಮೂಗು ಮೇಲೆತ್ತಿಕೊಂಡು ಹಾಕಿಸುತ್ತಿದ್ದಾರೇಂತ ನನ್ನ ತಂಗಿ ಹೇಳುತ್ತಾಳೆ. ಇದು ನಿಲ್ಲಬೇಕು. ಈಚೆಗೆ ಇವರಿಗೆಲ್ಲಾ ಒಂದು ತಿಂಗಳ ದಂಡಸಂಬಳ ಬೇರೆ ಮುಫತ್ತು ಕೊಟ್ಟರಂತೆ. ಅದಕ್ಕೇ ಇಷ್ಟು ಹೆಚ್ಚಿಕೊಂಡಿರಬೇಕು.

ದಯುವಿಟ್ಟು ಇದನ್ನು ಅಚ್ಚುಹಾಕಿಸಿ.

ಇತಿ,

ಚಿ॥ ಪುಟ್ಟರಾಜ.

ಮೋಸ ಭವಿಷ್ಯ

—೦—

[ಸೂಚನೆ:—ಮೇಷ, ವೃಷಭ, ಮಿಥುನ, ಕರ್ಕಾಟಕ ರಾಶಿಯವರು 1 ಮತ್ತು ೩ನ್ನೂ; ಸಿಂಹ, ಕನ್ಯ, ತುಲಾದವರು 2 + 6 ಮತ್ತು ೧೧ರ ಕೊನೇಭಾಗವನ್ನೂ; ವೃಶ್ಚಿಕ, ಧನು, ಮೀನ, ಕುಂಭ ರಾಶಿಯವರು ಮಿಕ್ಕದ್ದನ್ನೂ, ಬಕರ ರಾಶಿಯವರು ಎಲ್ಲವನ್ನೂ ನೋಡಿ.]

1. "ಕೂಪೇಪಶ್ಯಪಯೋನಿಧಾವಪಿ ಘಟೋ ತುಲ್ಯಂ ಜಲಂಪ್ರಾಪ್ಯತೆ" ಎಂದಂತೆ, ನರನು ಕನಕಾದ್ರಿಯ ಮೇಲಿದ್ದರೂ ಆತನ ಹಣೆಯಲ್ಲಿ ಬರೆದಷ್ಟೇ ದೊರೆಕೀತೆ ಹೊರತು, ಕೊಂಚವೂ ಕೊಸರು ದೊರಕಲಾರದು. ಈ ತಿಂಗಳು ನಿಮಗೆ ಅಪದ್ಧನ ಯೋಗವಿದೆ. (ಸರ್ಕಾರದವರು ಕೊಟ್ಟಿರುವ ತಾತ್ಕಾಲಿಕ ಪರಿಹಾರ ದ್ರವ್ಯವೂ ಇದಕ್ಕೆ ಸೇರಿದೆ) ಮತ್ತು ನಿಮ್ಮ ಪತ್ನೀ ಆರೋಗ್ಯವು ಕೆಡುವ ಸಂಭವವುಂಟು.

2. ನಿಮ್ಮ ಬ್ಯಾಂಕು ಸರ್ಕಾರ ವಗೈರೆ ಸ್ಥಳಗಳಲ್ಲಿ ಜಮವಾದ ಹಣದ ವಾಪ್ಸು ಯೋಚನೆ ನಿಮ್ಮನ್ನು ಬಹು ಚಿಂತೆ ಗೀಡುಮಾಡಿದೆ. 'ತಾಳಿದವನು ಬಾಳಿಯಾನು' ಎಂಬ ಗಾದೆ ಇಲ್ಲಿ ಸರಿಹೋಗುವುದಿಲ್ಲ. ಆದರೂ ತಾಳಿ. "ಸರ್ಕಾರಕ್ಕೆ ಹೋದ ಹಣ, ಸ್ಮಶಾನಕ್ಕೆ ಹೋದ........" ಎಂಬುದು ಕೇವಲ ಅನುಭವದ ಮಾತೇ ಹೊರತು....................

3. ಸಾಂಸಾರಿಕ ತಾಪತ್ರಯಗಳು ಹೆಚ್ಚಿಕೊಳ್ಳುತ್ತಿರುವುದಕ್ಕೂ ನಿಮ್ಮ ಪತ್ನಿಯು ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದಕ್ಕೂ ಸಂಬಂಧ ಕಲ್ಪಿಸಬೇಡಿ. ಪರಿಸ್ಥಿತಿಯನ್ನು ರಾಜಕೀಯ ದೃಷ್ಟಿಯಿಂದ ನೋಡಿ, ಈ ತಿಂಗಳು ನಿಮ್ಮ ತಲೆಯ ಅಧೋಭಾಗಕ್ಕೆ ಹತ್ತಿರದ ಬಂಧುವರ್ಗದಿಂದ ಒಂದು ಬಲವಾದ ಏಟು ಬೀಳಬಹುದು. ನೀವೆಷ್ಟು ಎಚ್ಚರಿಕೆಯಿಂದಿದ್ದರೂ ತಪ್ಪಿಸಿಕೊಳ್ಳಲಾರಿರಿ.

4. "ಕೊಟ್ಟದ್ದು ತನಗೆ"........ಹೇಗೆ? ಎಂಬ ಪ್ರಶ್ನೆ ಎದ್ದಿದೆ ನಿಮಗೆ. ಯೋಚಿಸಬೇಡಿ ಉತ್ತರಕ್ಕೆ, ಬಕರ ರಾಶಿಯ ಸ್ತ್ರೀಭವಿಷ್ಯವನ್ನು ನೋಡಿ.

5. ನೀವು 42ರ ಗಲಭೆಯಲ್ಲಿ ಒಂದು ಕಣ್ಣು ಕಳೆದುಕೊಂಡಿದ್ದು ನಿಮ್ಮ ಹೆಸರು ಹದಿನಾರು ಅಕ್ಷರಗಳನ್ನು ಮೀರಿದ್ದಾದರೆ! ನಾನೇನ್ಹೇಳಲಿ ನಿಮ್ಮ ಹಣೆಯ ಬರಹವನ್ನು!! ಬರುವ ಅಮಾವಾಸ್ಯೆ ಒಳಗೇ ನಿಮಗೆ ಭಾರಿ ಸರ್ಕಾರಿ ಹುದ್ದೆ ಆಗೇ ಆಗಬೇಕು............ಇದು ಸ್ತ್ರೀಯರಿಗೆ ಸಂಬಂಧಪಡುವುದಿಲ್ಲ....

6. ' ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ ' ಎಂಬುದಕ್ಕೂ, ಈ ರಾಶಿಯ ಅನೇಕರ ಹಿಟ್ಟಿನ ಚೀಟಿ ' ಬಿ ' ಕ್ಲಾಸ್ ಆಗಿರುವುದಕ್ಕೂ ನಿಕಟ ಸಂಬಂಧವಿದ್ದಂತೆ ತೋರುತ್ತೆ. ' ಎ ' ಕ್ಲಾಸಿನವರನ್ನು ನೋಡಿದರೆ ನಿಮಗೆ ರಾಮರಾಜ್ಯದ ನೆನಪಾಗಿ ಹೊಟ್ಟೆಯಲ್ಲಿ ಕಿಚ್ಚೇಳುತ್ತೆ. ಶಾಂತಿ ಇರಲಿ, ಅತ್ತೆ ಗೊಂದೇಕಾಲ ?

7. ಈ ಸಾರಿ ಪರೀಕ್ಷೆಗೆ ಹೋದ ಹಾಗೂ ಹೋದ ಸಾರಿ ಪರೀಕ್ಷೆಯಲ್ಲಿ ಹೋದ ವಿದ್ಯಾರ್ಥಿಗಳು ಫಲಿತಾಂಶ ಕುರಿತು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ನಿಮ್ಮ ನಿಮ್ಮ ಬುದ್ಧಿಯ ಮಟ್ಟಕ್ಕೂ ಫಲಿತಾಂಶಕ್ಕೂ ಸಂಬಂಧವಿರಲಾರದು. ನಿಮ್ಮ ಅದೃಷ್ಟ 35·00ನ್ನು ಮೀರಿದರೆ ನಿಮ್ಮ ಹೆಸರು 'ಅದೃಷ್ಟಶೇಕಡಾ'ದಲ್ಲಿದ್ದೇ ತೀರಬೇಕು. ಆದರೆ ಈ ' ಅದೃಷ್ಟಶೇಕಡಾ ' ವಿದ್ಯಾರ್ಥಿನಿಯರಿಗೆ ಸೇರಿಲ್ಲ-

8. " ಅಪ್ಪಹಾಕಿದ ಆಲದಮರ—ಕಡಿದರೆ ಸೌದೆ–ಜೋಡಿಸಿದರೆ ಊಟ ದೆಲೆ " ಎಂತ ನೀವು ದೈವಾಧೀನರಾಗಿರುವುದು (ದೇವರಮೇಲೆ ಭಾರಬಿಟ್ಟಿರು ವುದು) ಶೋಚನೀಯ- ನಿಮ್ಮ ಸುತ್ತಲಿನ ಪ್ರಪಂಚದ ಏರಿಳಿತಗಳೇ ನಿಮಗೆ ತಿಳಿಯದಾಗಿದೆ. ಮನೆಯಲ್ಲೇ ನಿಮಗೆ ಸನ್ಮಾನವಿಲ್ಲ–ಮರ್ಯಾದೇ ಮೊದಲೇ ಇಲ್ಲ. ಈ ತಿಂಗಳ 30 ದಿನಗಳ ಪೈಕಿ ಕೃಷ್ಣಪಕ್ಷದ ಯಾವುದೋ ಒಂದು ದಿನ ನಿಮ್ಮ ಪತ್ನೀಮಣಿ ನಿಮ್ಮನ್ನು ಬಹುವಚನದಲ್ಲಿ ಸಂಬೋಧಿಸಿ ನಿಮಗೆ ಜೀವ ಕಳೆ ತರುತ್ತಾರೆ. ಆ ನಂತರ ಎರಡು ದಿನ ಅತಿ ಖರ್ಚಿನ ಬಾಬ್ತುಗಳು.


9. ನಿಮ್ಮ ದೈವಿಕ ಹಾಗೂ ಮಾನಸಿಕ ಸ್ಥಿತಿ ತೀರಾ ಹದಗೆಟ್ಟು ನೀವು ನಿಮ್ಮ ವೈದ್ಯರಿಂದ ವಿಷಕೂಡ ಕೇಳುವ ಸಂಭವ ಬರಬಹುದು. ಹೊಟ್ಟೆಕರುಳು ಇತ್ಯಾದಿಗಳ ಸ್ಥಿತಿ ಕಳವಳಕ್ಕಾಸ್ಪದವಾಗುತ್ತೆ. ಸರ್ಕಾರದವರು ಮೆಕ್ಕೇ ಜೋಳ ವನ್ನೆಲ್ಲಾ ಹೋಟಲುಗಳಿಗೆ ಕೊಡುತ್ತಿರುವುದಕ್ಕೂ, ನಿಮ್ಮ ಹೊಟ್ಟೆಶೂಲೆಗೂ, ನಿಮ್ಮ ಸ್ನೇಹಿತರುಗಳು ಸಂಬಂಧ ಹುಡುಕುತ್ತಾರೆ. ನೀವು ಹೆದರಬೇಡಿ. ಹರಳೆಣ್ಣೆ ಬೆಲೆ ಎಷ್ಟಾದರೂ ಏರಲಿ !

10. ನೀವು ಭಾರಿ ಕಡೆ ಮದುವೆ ಸಂಬಂಧ ಬೆಳೆಸಬೇಕೆಂದಿದ್ದೀರಿ. ಶೇಕಡಾ 50 ಭಾಗ ಒಪ್ಪಿಗೆಯಾಗಿದೆ............

—ಟೀಯಸ್ಸಾರ್ರಾಸ್.

ಶಿಸ್ತು

ಆರೋಗ್ಯ ಸಂರಕ್ಷಣೆಗೆ ಲಕ್ಷಾಂತರ ನಿಯಮಾವಳಿಗಳನ್ನು ಸರ್ಕಾರದವರೂ ಮುನಿಸಿಪಾಲಿಟಿಗಳೂ ವರ್ಷ ವರ್ಷ ಜಾರಿಗೆ ತರುವರಾದರೂ, ಕಾರ್ಯತಃ ಅವುಗಳನ್ನು ಪರಿಪಾಲಿಸಿಕೊಂಡು ಬರುತ್ತಿರುವುದು ಬೆಂಗಳೂರು ಕಂಟೋನ್‌ಮೆಂಟ್ ಒಂದರಲ್ಲೇ ಎಂಬುದು ಜಗತ್ಪ್ರಸಿದ್ಧವಾದ ವಿಷಯವಾಗಿದೆ. ಮೊನ್ನೆ ನಾನು ಆಯುಷ್ಕರ್ಮಕ್ಕಾಗಿ ಒಂದು ಅಂಗಡಿಗೆ ಹೋಗಿದ್ದೆ. ಪೀಠದಲ್ಲಿ ನನ್ನನ್ನು ಕೂರಿಸಿದ ಆತ ನನ್ನ ಹತ್ತಿರ ಬಂದು ನಿಲ್ಲುತ್ತಲೂ ನಾನು ವಪನ ಶಾಸ್ತ್ರದ ಅಪಾಯಕಾಂಡವನ್ನು ಪ್ರಸ್ತಾವಿಸಿದೆ. ಆಗ, ಅವನು, "ನೋಡಿ, ಸ್ವಾಮಿ! ಈ ಕೊಠಡಿಯನ್ನು ನಾವು ಫಿನ್ ಆಯಲ್‌ನಲ್ಲಿ ತೊಳೆದು, ನೆಲಕ್ಕೆ, ಬೇಯಿಸಿದ ಜಮಖಾನೆ ಹಾಸಿದೇವೆ, ಕುರ್ಚಿಗಳನ್ನೆಲ್ಲ ಯೂಕಲಿಪ್ಟಸ್ ಮರದಿಂದ ಮಾಡಿಸಿದೇವೆ. ಸೋಸಿದ ಗಾಳಿಯನ್ನೇ ಒಳಕ್ಕೆ ಬಿಡೋದು. ಟವಲುಗಳನ್ನೆಲ್ಲ ಐಯೊಡಿನ್ ಕಾರ್ಖಾನೆಯ ಹಿಂಭಾಗದಲ್ಲೇ ನೆಯ್ಸಿ ತರಿಸಿದೇವೆ. ಕತ್ತಿಗಳನ್ನೆಲ್ಲ ಬೋರಿಕ್ ಕಲ್ಲುಗಳಮೇಲೆ ಹರಿತಮಾಡಿದೇವೆ. ಸಾಬೂನನ್ನು ಸೀಮೆ ಎಣ್ಣೆಯಿಂದಲೇ ಮಾಡಿಸಿದೇವೆ. ಬಾಚಣಿಗೆ ಬ್ರಷ್ ಇತ್ಯಾದಿ ಎಲ್ಲ ಸಾಮಗ್ರಿಗಳನ್ನೂ ಲೈಸಾಲ್‌ನಲ್ಲಿ ಕುದಿಸಿ ಆರಿಸಿದೇವೆ, ನಿಮಗೂ ಈಗ ಕ್ಲೋರೋಫಾರಂ ಕೊಡುತ್ತೇವೆ" ಎಂದ. "ಅದಿರಲಿ! ಹೊತ್ತಾಯಿತು. ನಿನ್ನ ಕೆಲಸ ಪ್ರಾರಂಭಮಾಡು. ಬರೀ ಬಾಯಿಮಾತಿನಲ್ಲಿ ಬಡಾಯಿಕೊಚ್ಚಿದರೆ ಏನು ಬಂದ ಹಾಗಾಯಿತು?" ಎಂದೆ. ಆಗ, ಅವನು, "ನಾನಲ್ಲ ಸಾರ್! ಬಾರ್ಬರ್! ಅವರು ಇಷ್ಟರಲ್ಲೇ ಬರ್ತಾರೆ" ಎಂದ. "ಯಾಕೆ? ಎಲ್ಲಿಗೆ ಹೋಗಿದಾನೆ ಅವನು?" ಎಂದು ಕೇಳಿದೆ. 'ಅವರೇ? ಅವರನ್ನು ಕುದಿಯುವ ನೀರಿನಲ್ಲಿ ಹಾಕಿದಾರೆ. ಎಲ್ಲ ಸಿದ್ಧವಾದಮೇಲೆ, ಎತ್ತಿಕೊಂಡು ಬರುತ್ತಾರೆ." ಎಂದ...... ಶಿಸ್ತು ಅಂದರೆ, ಅದು.



ಹಬ್ಬಕ್ಕೆ ಬಂದ ಸೂಕ್ಷ್ಮ ಸಲಹೆಗಳು.

ಹೋರಾಶಾಸ್ತ್ರಿಗೆ

ಭವಿಷ್ಯ ನುಡಿದು, ರಾಜತಂತ್ರಜ್ಞರನ್ನೂ ಸಾಹಿತಿಗಳನ್ನೂ ಸಾಮಾನ್ಯ ಜನರನ್ನೂ ಜೂಜು ಬಾಧಿತರನ್ನೂ, ಎಚ್ಚರಿಸುತ್ತಿರುವ ಕನ್ನಡಿಗರಿಗೆ ನಾವು ಎಷ್ಟು ತೆತ್ತರೂ ಸಾಲದು. ಆದರೆ, ಅವರ ಹೇಳಿಕೆಗಳಲ್ಲಿ ಲೋಕವ್ಯವಹಾರದ ಅರಿವು ಕಡಮೆಯಾಗಿರುವುದು ತುಂಬ ಶೋಚನೀಯ. ಅವರು ತಮ್ಮ ಕವಡೆಗಳನ್ನು ಯಾವುದೋ ಪುರಾತನ ಕಾಲದ ಓಲೆಗರಿ ಪುಸ್ತಕಗಳ ಪಂಕ್ತಿಗನುಗುಣವಾಗಿ ಪರೀಕ್ಷಿಸುತ್ತಿರುವುದೇ ಇದಕ್ಕೆ ಕಾರಣವಿರಬಹುದು. ಈಗಿನ ಕಾಲದ ಬೂದುಗಾಜು, ತ್ರಿಕೋಣಮಿತಿ, ಎರಡನೆಯ ವಿ ಮುಂತಾದ ಉಪಕರಣಗಳಿಂದ ಅವರು "ನಭೋ" ಮಂಡಲವನ್ನೀಕ್ಷಿಸಲು ಕಲಿತರೂ ಕೂಡ, ನಮ್ಮ "ನಭೂ" ಮಂಡಲದ ಪರಿಸ್ಥಿತಿಯನ್ನೂ ಕೊಂಚಮಟ್ಟಿಗೆ ತಿಳಿದು, ಭವಿಷ್ಯ ಹೇಳುವುದು ಯುಕ್ತವಲ್ಲವೆ? ಕಾಸಿಗೆ ತಕ್ಕ ಕಜ್ಜಾಯ ಎಂಬಂತೆ, ಹೋರಾಶಾಸ್ತ್ರಜ್ಞರೂ ಕೂಡ, ಕೆಲಸಕ್ಕೆ ಬಾರದ ಭವಿಷ್ಯ ನುಡಿದರೆ, ಭಾರತದ ಗತಿ ಏನಾಗಬೇಕು ?

"ಬಹುದೂರದ ಪ್ರವಾಸದ ಸುಖ ಲಭಿಸುವುದು", "ಪತಿ ಪ್ರೇಮವೂ ಆಭರಣಗಳೂ ದೊರೆಯುತ್ತವೆ," ಎಂದು ಮುಂತಾಗಿ ನನಗೆ ಭವಿಷ್ಯ ಹೇಳಿದರೆ, ನಂಬಿಕೆ ಉಂಟಾಗುವುದು ಹೇಗೆ? ಪರಸ್ಪರವಿರೋಧವಾದ ಈ ವಿಷಯಗಳು ಒಟ್ಟಾಗಿ ನನಗೆ ಲಭಿಸುವುದೆಂದು ಸೂರ್ಯನೇ ಅಶರೀರಿ ನುಡಿದರೂ, 'ನಾನು ಇಂದು ನಂಬುವ ಹಾಗಿಲ್ಲ. ಆಭರಣದ ಮಾತೆತ್ತಿದರೆ, ಪತಿಯಪ್ರೇಮ ಅರೆಕ್ಷಣವೂ ಕೂಡ ಮುಂದುವರಿಯುವುದಿಲ್ಲವೆಂಬುದನ್ನು ಸ್ತ್ರೀಲೋಕವೇ ಬಲ್ಲುದು. ಪ್ರವಾಸದಲ್ಲಿ ಸುಖ ....ಕಡೆಯ ಪ್ರವಾಸ ಒಂದರಲ್ಲೇನೆ! ನಿಮ್ಮ 'ಪತಿರಾಜರಿಗೆ ಡಿಗ್ರೇಡಾಗುವುದು; ಇತರರಿಗೆ ಶುಭವಾರ್ತೆ" ಎಂದು ಒಂದೇ ಉಸುರಿನಲ್ಲಿ ಸುಣ್ಣವನ್ನೂ ಬೆಣ್ಣೆಯನ್ನೂ ಕಲಿಸಿ ಊದುವುದು ಯಾವ ಹೆಂಗಸಿಗೆ ತಾನೆ ಒಪ್ಪಿಗೆಯಾದೀತು ? ಭವಿಷ್ಯಸಾಹಿತ್ಯದ ಅನೇಕ ಮಾತುಗಳು ಪುನರುಕ್ತಿಗಳಾಗಿವೆ.

"ಈ ವರ್ಷ ನೀವೇ ಆಳುವವರು- ಇದರಲ್ಲಿ ಸಂಶಯವಿಲ್ಲ." ಎಂದು ನನಗೇಕೆ ಆಶ್ವಾಸನಕೊಡಬೇಕು ? ಹೋದವರ್ಷವೂ ನಾನೇ ಆಳಿದವಳು ; ಇವರ ಕೈ ಹಿಡಿದಾರಭ್ಯ, ಭವಿಷ್ಯಕಾರರು ಹೇಳಿರುವ ಹಾಗೆ, "ವಾದವಿವಾದಗಳಲ್ಲಿ" ನನಗೇ ಜಯ". ಅಂಬದ್ದುರಲ್ಲಿ, ಅವರು ಹೊಸದಾಗಿ ಏನನ್ನೂ ತಿಳಿಸಿದ ಹಾಗಾಗಲಿಲ್ಲ. "ನಿಮ್ಮ ಮನೆದೇವರನ್ನು ಪೂಜಿಸಿದರೆ, ನಿಮಗೆ ಸಂಸಾರ ಸುಖ ದೊರೆಯುವುದು" "ಕೆಲವು ಮುಖ್ಯ ಗ್ರಹಗಳು ಕ್ರೂರವಾಗಿರುವುದರಿಂದ ನೀವು

ನ್ನೆಯೆಲ್ಲ ಕಣ್ಣಾಗಿ ವರ್ತಿಸಬೇಕು'' ಎಂದು ಬಳಸಿ ಬಳಸಿ ಉಪದೇಶಮಾಡು ವುದಕ್ಕಿಂತ, ಗಂಡ, ಅತ್ತೆ, ನಾದಿನಿ ಎಂದು ನೇರವಾಗಿ ಹೇಳಿದರೆ, ಹೊರಾಡ ವರಿಗೆ ಆಗುವ ಅನಾಹುತವಾದರೂ ಏನು? ''ಗುದ್ದಲಿಯನ್ನು ಗುದ್ದಲಿಯೆಂದೇ ಕರೆ'' ಎಂದು ಇಂಗ್ಲೀಷಿನವರೂ ಹೇಳುವರಲ್ಲಾ!

ಭವಿಷ್ಯಕಾರರು ಗುಟ್ಟುಗುಟ್ಟಾಗಿ, 'ಇಟ್ಟು' ಬರೆಯುವುದನ್ನು ಇನ್ನಾದರೂ ತ್ಯಜಿಸುವರೆ? ''ಈ ವರ್ಷದ ದೀಪಾವಳಿಯನ್ನು ನೀವು ವಿಜೃಂಭಣೆಯಿಂದ ಮಾಡುವಿರಿ!'' ಎಂದು ಹೇಳುವಾಗ, 'ದಿವಾಳಿ' ಎಂದೇ ಏಕೆ ಹೇಳಿಬಿಡ ಬಾರದು? ''ನಿಮ್ಮ ಪತಿರಾಜರ ವ್ಯಾಪಾರವು ನಿರ್ವಿಘ್ನವಾಗಿ ನೆರವೇರುವುದು'' ಎನ್ನುವುದಕ್ಕಿಂತ, ಆ ಹಾಳು ಹೆಂಗಸನ್ನು ಅವರು ಬಿಡುವ ಹಾಗಿಲ್ಲ, ಎಂದು ಹೇಳಿ ಪೂರೈಸಬಾರದೆ? ನಾನು ಹಾರ್ಮೋನಿಯಂ ಹಿಡಿದು ಹಾಡುವುದನ್ನು ಓರಗಿತ್ತಿಯರು ಕೊಂಡಾಡುವುದಿಲ್ಲ ಎಂಬುದಕ್ಕೆ, ''ಅರಸಿಕ ಮಹಿಳಾಮಣಿಯರ ಆಗಮನದಿಂದ ನಿಮಗೆ ವಿಪರೀತ ಮಾನಭಂಗವಾಗುವುದು'' ಎಂಬ ದ್ರಾವಿಡ ಪ್ರಾಣಾಯಾಮ ಏಕೆ? ಇಲ್ಲಿ, ಇವರ ಹತ್ರ ಏಗಲಾರದೆ, ಸಲಸಲಕ್ಕೂ ತವರು ಮನೆಗೆ ಓಡಿಹೋಗುತ್ತೀಯಾ, ಎನ್ನುವ ಬದಲು, ''ಮೇಲಿಂದಮೇಲೆ ಪ್ರವಾಸ ಮಾಡುವ ಯೋಗವಿದೆ'', ಎಂದೂ; ಮಕ್ಕಳನ್ನು ಹಡೆಯುತ್ತೀಯ, ಎಂಬು ದರ ಬದಲು, ''ಈ ವರ್ಷ ನಿಮಗೆ ಪ್ರಾಣಿಸಂಗ್ರಹ ಮಾಡುವ ಯೋಗವಿದೆ'' ಎಂದೂ, ನಾಟಕದ ಕಂಪನಿ ಡೈರೆಕ್ಟರಿಂದ ಒಬ್ಬಳ ಆರ್ಥಿಕಸ್ಥಿತಿ ಉತ್ತಮವಾಗು ತ್ತದೆ ಎಂಬುದಕ್ಕೆ, ''ನವಗ್ರಹಗಳಿಂದ, ಮುಖ್ಯವಾಗಿ, ಶನಿಮಹಾತ್ಮನಿಂದ ಕಷ್ಟಗಳೆಲ್ಲ ನಿವಾರಣೆಯಾಗುತ್ತದೆ'' ಎಂದೂ, ಡೊಂಕು ನುಡಿಯುವುದೇಕೆ? ''ಅಕ್ಕತಂಗಿಯರೇ! ಬಂದದ್ದೆಲ್ಲ ಬರಲಿ! ಆದರೆ, ಗೋವಿಂದನ ದಯೆ ನಿಮ್ಮ ಮೇಲಿರುವ ತನಕ ಭಯಪಡಬೇಡಿ'' ಎಂದು ಸಮಾಧಾನ ಪಡಿಸುವ ಈ ಜ್ಯೋತಿಷ್ಕರು, 'ಗೋವಿಂದ' ಎಂದರೆ ಯಾರು, ಎಂಬುದನ್ನೂ ವಿಶದಪಡಿಸಿದರೆ ಚೆನ್ನಾಗಿರುತ್ತಿತ್ತಲ್ಲವೆ? ಗೋವಿಂದ, ಅಂದರೆ, ಆತ ಬ್ಯಾಂಕರೇ? ದಿಗ್ದರ್ಶ ಕನೇ? ಸಮಾಜ ಸುಧಾರಕನೇ? ಅಥವಾ, ದೇವರೇ ?..... ......ವಿವರವಾಗಿ ಹೇಳಲು ಭವಿಷ್ಯಕಾರನಿಗೆ ಭಯವೇಕೆ? ಹಾಗೆಯೇ, ''ಸರ್ಕಾರದಲ್ಲಿ ನಿಮ್ಮ ಪತಿರಾಜರಿಗೆ ತಕ್ಕ ಮರ್ಯಾದೆ ಸಿಗುವುದು'' ಎಂದು ಹೇಳುವದಕ್ಕಿಂತ, ವಿಶದ ವಾಗಿಯೇ, ಅವರಿಗೆ ಡಿಸ್‌ಮಿಸ್ ಆಗುವುದೆಂದು ಹೇಳಿಬಿಡಬಾರದೇಕೆ? ''ನಿಮ್ಮ ಅಧಿಕಾರ ಕ್ಷೇತ್ರವು ಈ ವರ್ಷ ಹೆಚ್ಚು ಪ್ರಸಾರವಾಗುವುದು'' ಎಂಬುದಕ್ಕಿಂತ, ''ನಿಮ್ಮ ಗಂಡನ ತಮ್ಮ, ಓದು ಮುಂದುವರಿಸುವುದಕ್ಕಾಗಿ ನಿಮ್ಮಮನೆ ಕೂಳು ಕತ್ತರಿಸಲು ಬರುವನು, ಜೋಕೆ'' ಎಂದು ಬರೆಯುವುದೇ ಎದೆಗಾರಿಕೆ.

ನನ್ನ ಒಂದು ರಾಶಿಯ ಭವಿಷ್ಯದಲ್ಲೇ, ಈ ಒಂದು ವರ್ಷದಲ್ಲೇ, ಇಷ್ಟು ಅಸ್ಪಷ್ಟತೆಯೂ, ಕ್ಲಿಷ್ಟತೆಯೂ, ಕಂಡು ಬಂದಿದೆ. ಉಳಿದವರು, ಉರಿಯನ್ನು

ನುಡಿಸಿ ತಣಿಯಲಾರದೆ ತತ್ತರಿಸುತ್ತಿರಬಹುದು. ಆದರೆ, ನನ್ನ 'ಭವಿಷ್ಯ' ದಲ್ಲಿ "ನಿಮ್ಮ ಲೇಖನಗಳು ಪ್ರಕಾಶ ಹೊಂದಿ, ಅವುಗಳ ಕೀರ್ತಿ ನಭೋವ್ಯಾಪಿಯಾಗುವುದು" ಎಂದಿರುವುದರಿಂದ, ನಾನು ಇದನ್ನು ಬರೆಯುವ ಸಾಹಸಕ್ಕೆ ಹೊರಟೆ.... ....ಆದರೆ, 'ನಭೋ' ವನ್ನುವುದು, 'ಲಬೊ' ಎನ್ನುವುದರ ಅಶುದ್ಧ ಮುದ್ರಣವಲ್ಲ, ತಾನೆ?

—ಕೇಸರಿ.



ಬಾವಲಿ

ಕತ್ತೆ! ನಿನ್ನಯ ಚುರುಕಿಗೆ ಮೆಚ್ಚಿದೆ
ಎಂದನು, ಅಗಸನು, ಕತ್ತನು ಸವರುತ ;—
ಏನುಕೊಟ್ಟರು ಸಾಲದು, ಬುದ್ಧಿಗೆ
ಹೊಗಳಲು ಗುಣಗಳ, ಮಾತೇ ಸಾಲದು
ತೆಗಳಲು ಇವನನು ಮಾತೇ ಬಾರದು
ಮಾನವಂತನಿಗೆ ಬಾವಲಿ ನೀಡುವೆ—
ಎನ್ನುತ ಬೇಗನೆ ಪೇಟೆಗೆ ಹೋಗಿ
ಸನ್ನುತ ಕತ್ತೆಯ ಮನ್ನಿಸಲೆಂದು
ಗಣ ಗಣ ಜಣ ಜಣ ಬಡಿವಾ ಗಂಟೆಯ
ಗಳದಲಿ ಬಿಗಿದನು ಸಂತಸದಿಂದ.
ಕಟ್ಟಿದ ಬಿರುದನು ಕಂಠದಿ ತಾಳಿ
ಕತ್ತೆಗೆ ಭೂಷಣ ಘೋಷವಮಾಡಿ
ಕತ್ತೆಯು ಚಿಗಿ ಚಿಗಿತೋಡಿತು ಬಯಲಲಿ ;
ನೆತ್ತಿಯ ತುಂಬಲು ಪಿತ್ತವು ಬೇಗನೆ
ಕುದುರೆಗು ಮಿಗಿಲೆಂದೇರಿತು ಭಾವನೆ,

* * *

ಅಂದಿನವರೆಗೂ ಆ ಬಡಪ್ರಾಣಿ
ಸದ್ದೇ ಇಲ್ಲದೆ ಹೊಲದಲಿ ನುಸುಳಿ
ಮೆದ್ದೇ ಬಿಡುವುದು ರಾಗಿಯನೆಲ್ಲ
ಬೇಲಿಯ ಬಿರುಕಲಿ ತಲೆಯನು ತುರುಕಿ
ಕಾಯಿಪಲ್ಯದ ಸೊಪ್ಪನ್ನೆಲ್ಲ
ತಿಂದೇ ಬಿಡುವುದು ಮೊಸ ಮೊಸ ಹಸಿ ಹಸಿ.
ಆದರೆ, ಗಂಟೆಯು ಕಟ್ಟಿದಮೇಲೆ
ಕತ್ತೆಗೆ ಸಿಂಗರ ಹೆಚ್ಚಿದಮೇಲೆ
ಎದ್ದರೆ ಬಿದ್ದರೆ ಗಣ ಗಣ ನಿನದ !

ಕದ್ದರೆ ಮೆದ್ದರೆ, ಜಣ ಜಣ ಜಾಗಟೆ !
ನುಗ್ಗಿದ ಕಡೆ ಜನ ದೊಣ್ಣೆಯ ಬೀಸುತ,
ಬಗ್ಗಿದ ಕಡೆ ಜನ ಬಂದೆ ಎನ್ನುತ,
ಬೀರಿದರಿಕ್ಕಿದರೇಟನು, ಬಲು ಬಲು,
ಚೀರಿದರೊಕ್ಕೊರಲಲ್ಲೇ ಹುಡುಗರು
ಸಿಕ್ಕಿದ ಕೋಲ್ಗಳನೆಸೆದರು ಬಿಸಿ ಬಿಸಿ,
ಪಕ್ಕೆ ಎಲುಬುಗಳ ಪುಡಿಪುಡಿ ಮಾಡುತ.

*　　　*　　　*

ಗಂಟೆಯೆ, ಕತ್ತೆಗೆ ಕಂಟಕವಾಯಿತು !
ಬಾವಲಿ, ಕತ್ತೆಗೆ ಸಾವನು ತಂದಿತು ?

(ಒಂದು ರಷ್ಯನ್ ಕತೆ)



ಈ ಸ್ವೆಟರ್ ಯಾವಾಗ ಹಾಕಿದೆಯೇ ?
ಹಬ್ಬಕ್ಕೆ ಸೀರೆ ತರುಕ್ಕೆ ಕ್ಯೂ ನಿಂತಾಗ ಹಾಕಿ ಮುಗಿಸಿದೇ ಕಣೇ—

ಫ್ರಂಟ್ ಸೀಟ್

ಮದ್ರಾಸಾಧಿಪತ್ಯದಲ್ಲಿ ಇನ್ನುಮೇಲೆ ಯಾವ ಲೈನಿನವರೂ ತಮ್ಮ ಬಸ್ಸುಗಳ ಫ್ರಂಟ್ ಸೀಟಿನಲ್ಲಿ ಆಗಲೇ ಕುಳಿತಿದ್ದವರನ್ನು ಇಳಿಸಿ, ಅಲ್ಲಿ ರೆವೆನ್ಯು ಹಾಗೂ ಪೋಲೀಸ್ ಅಧಿಕಾರಿಗಳಿಗೆ ಜಾಗ ಕೊಡಿಸುವ ಹಾಗಿಲ್ಲವೆಂದೂ, ಹಾಗೆ, ಅಲ್ಲೇ ತಮ್ಮನ್ನು ಕೂಡಿಸಬೇಕೆಂದು ಹಟ ತೊಡುವ ಅಧಿಕಾರಿಗಳ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂದೂ ಅಲ್ಲಿನ ಸರ್ಕಾರ ಪ್ರಕಟಿಸಿದೆ. ಇದರಿಂದ, ರೆವೆನ್ಯು ಹಾಗು ಪೋಲೀಸ್ ಅಧಿಕಾರಿಗಳ ಅಂತಸ್ತನ್ನೇ ಸರ್ಕಾರ ಕಡಮೆ ಮಾಡಿಬಿಟ್ಟಿದಾರೆ ಎಂದು ಧಾರಾಳವಾಗಿ ಹೇಳಬಹುದು. ಹಿಂದಿನ ಸೀಟುಗಳಲ್ಲೂ ತೊಟ್ಟಿಯ ನಾಲ್ಕುಕಡೆಗಳಲ್ಲೂ ಕಿಕ್ಕಿರಿದು ಎಲೆ ಅಡಿಕೆ ಜಗಿಯುತ್ತಾ ಇರುವ ಸಾಮಾನ್ಯ ಜನ ಸಮುದಾಯದ ಜೊತೆಯಲ್ಲೇ ತೋಳಿಗೆ ತೋಳುಕೊಟ್ಟು, ಮೇಲ್ಕಂಡ ಅಧಿಕಾರಿಗಳು ಕೂಡಬಹುದೆ? ಕೂಡುತ್ತಾರೆಯೇ? ಬಸ್‌ನಲ್ಲಿ ಫ್ರಂಟ್‌ಸೀಟೇ ಅಗ್ರಾಸನ; ಅಲ್ಲಿ ಉಗ್ರಾಸನರೇ ಕೂಡಬೇಕು. ಅಲ್ಲಿ ಕೂತರೆ, ಬೇರೊಬ್ಬರ ಬೆನ್ನನ್ನೂ ನಾವು ಅವಲೋಕಿಸಬೇಕಾದ್ದಿಲ್ಲ. ಎಲ್ಲರೂ, ನಮ್ಮ ಬೆನ್ನನ್ನೇ ನೋಡುತ್ತಿರುತ್ತಾರೆ. ನಾವು ಬಿಡುವ ಹೊಗೆ ವಾಹನ ದುಷ್ಟಕ್ಕೂ ವ್ಯಾಪಿಸಿ ಇತರರ ಮೂಗು ಮುರಿಯುತ್ತದೆ. ಬಸ್ಸಿನ ಸಾರಥಿಯ ಸರಿಸಮಾನವಾಗಿ ಕೂರುವುದೇ ದೊಡ್ಡತನವಲ್ಲವೆ? ಅವನೊಂದಿಗೆ ಹಿಂದೆ ಅದೇ ದಾರಿಯಲ್ಲಾದ ಬಸ್ ಅನಾಹುತಗಳನ್ನೆಲ್ಲ ವಿಮರ್ಶಿಸುತ್ತಾ, ಅವನಿಗೆ ಆಗಾಗ ಅನವಶ್ಯಕವಾದ ಸಲಹೆಗಳನ್ನು ಕೊಡುತ್ತಾ ಹೋಗುವುದೇ ಫ್ರಂಟ್‌ಸೀಟಿನವರ ಕೆಲಸ. ಯಾವ ಭಿಕ್ಷುಕ ಬಂದರೂ, ಅವನಿಗೆ ಮೊತ್ತಮೊದಲು ಇಲ್ಲ ಎಂದು ಹೇಳುವ ಗೌರವ ಫ್ರಂಟ್ ಸೀಟಿನವರದು. ಕಂಡಕ್ಟರೂ ಕೂಡ, ಉಳಿದ ಎಲ್ಲರಿಗೂ ಟಿಕೆಟ್ ಕೊಟ್ಟು ಅವರಿಂದೆಲ್ಲ ಹಣ ವಸೂಲು ಮಾಡಿದನಂತರ, ಫ್ರಂಟ್ ಸೀಟಿನವರನ್ನು ಬಹುಮರ್ಯಾದೆಯಿಂದ, ತಾವು ಎಲ್ಲಿಗೆ, ಸಾರ್, ಎಂದು ವಿಚಾರಿಸುತ್ತಾನೆ. ಆಗ, ಅರ್ಧಂಬರ್ಧದ ನಾಲ್ಕು ಬಟ್ಲೆರ್ ಇಂಗ್ಲೀಷನ್ನು ಅವನ ಕಡೆಗೆ ಎಸೆದು, ಡ್ರೈವರಿಗೆ ಒಂದು ಸಿಗರೇಟು ಕೊಟ್ಟರೆ ಸಾಕು, ಎಫ್. ಎಸ್. ಎಂದು ಬರೆದುಕೊಳ್ಳುತ್ತಾನೆ. ರೆವೆನ್ಯು ಪೋಲೀಸ್ ಅಧಿಕಾರಿಗಳು ಎಂದಮೇಲೆ, ಅವರು ಎಫ್. ಎಸ್. ಎಂಬುದು ಖಾತ್ರಿ—ಟಿ. ಎ. ಬರಲಿ, ಬರದೆ ಹೋಗಲಿ, ಅದನ್ನು ಕಟ್ಟಿಕೊಂಡು ಕಂಡಕ್ಟರಿಗೇನು? ಕಂಪನಿಯವರಿಗೇನು?

ಸರ್ಕಾರ ನಡೆಯುವುದೇ ಅಧಿಕಾರಿಗಳ ದರ್ಪದಿಂದ; ಅವರ ಇಂಗ್ಲೀಷು, ಅವರ ಖಾಕಿ ಚಡ್ಡಿ ಅವರ ಹ್ಯಾಟುಬೂಟುಗಳಿಂದ. ರೈತಾಪಿ ಜನ ಅವರನ್ನು

ಗುರುತಿಸುವುದು ಈ ತೆರನ ಬಾಹ್ಯಾಡಂಬರ, ಬಾಹ್ಯಭಾಷಣಗಳಿಂದ. ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೊ, ಎಂಬ ನಾಣ್ಣುಡಿಯಂತೆ, ರೆವೆನ್ಯು ಹಾಗೂ ಪೋಲೀಸ್ ಅಧಿಕಾರಿಗಳಿಗೆ ಫ್ರಂಟ್‌ಸೀಟ್ ಮರ್ಯಾದೆ ಕೊಟ್ಟು, ರೈತಾಪಿ ಜನ ಅವರಿಂದ ಮರ್ಯಾದೆ ಪಡೆಯಬೇಕಾಗುತ್ತದೆ. ಮದ್ರಾಸ್ ಸರ್ಕಾರದ ಹುಕುಂನ್ನು ಜಾರಿಗೆ ತರುವಾಗ, ಡ್ರೈವರಿಗೂ ಕಂಡಕ್ಟರಿಗೂ ಉಭಯಸಂಕಟ ವಾಗುತ್ತದೆ ಫ್ರಂಟ್‌ಸೀಟಿನ ಅನುಕೂಲಗಳಿಗಾಗಿ ಪ್ರಯಾಣಿಕರೆಲ್ಲ ಹೊಡೆ ದಾಡುವರು. ಅಲ್ಲಿ ಕಾಲಿಗೆ ಕಾವು, ತಲೆಗೆ ಗಾಳಿ; ಅಲ್ಲಿ, ಡ್ರೈವರನ ಎಡಗಡೆ ನಾಲ್ಕು, ಬಲಗಡೆ ಇಬ್ಬರು, ಇಷ್ಟೇ ಕೂಡಬೇಕು ಎಂಬ ನಿಯಮವಿದೆ; ಅಲ್ಲಿ ಮುಂಡಿಸಿದವರನ್ನೆಲ್ಲ ದಾರಿ ಉದ್ದಕ್ಕೂ ಹುಡುಗರು ಸಲಾಮು ಮಾಡುತ್ತಾರೆ. ಇದರಿಂದಾಗಿ, ಲಾಯರುಗಳೂ, ಡಾಕ್ಟರುಗಳೂ, ವರ್ತಕರೂ, ಬಿಳಿಬಟ್ಟೆ ಯವರೂ ಕಡೆಗೆ ಗಾಂಧಿ ಟೋಪಿಯವರೂ ಕೂಡ, ಮೊದಲೇ ಬಂದು ಅಲ್ಲಿ ಆಸನಸ್ಥರಾಗುತ್ತಾರೆ. ಸಬ್ ಇನ್‌ಸ್ಪೆಕ್ಟರಾಗಲಿ, ಅಮಿಲ್ದಾರರ ಸೋದರಳಿಯ ನಾಗಲಿ, ಬಂದರೆ, ಇಳಿದು ಬೇರೆ ಕಡೆ ಬದಲಾಯಿಸುವುದಿಲ್ಲ ಎಂದು ಜಗಳ ವಾಡುತ್ತಾರೆ. ಮಂತ್ರಿಗಳೇನೋ ಮೂರುದ್ದ ಕಾನೂನು ಕಟ್ಟಿಸಿಬಿಡುತ್ತಾರೆ. ಆದರೆ, ನಾಳೆ ದಿವಸ ಡ್ರೈವರೂ ಕಂಡಕ್ಟರೂ ಪೇಚಾಡಬೇಕಾದದ್ದು ಅಮಿಲ್ದಾ ರರು, ಇನ್‌ಸ್ಪೆಕ್ಟರು, ಇವರೊಂದಿಗೆ. ಕಾನೂನನ್ನು ನಂಬಿ ಕೈಕೈ ಹಿಸುಕಿಕೊಂಡರೆ, ಅಧಿಕಾರಿಗಳು ತಣ್ಣಗಾಗುವುದಿಲ್ಲ. ಇತ್ತಹಳ್ಳ, ಅತ್ತದಿಣ್ಣೆ ; ಉದ್ದಕ್ಕೂ ಕಿಂಕೃತಿ. ಆದರೂ, ದುಡ್ಡುಕೊಡುವವರನ್ನೂ ಕೊಡದೆ ಇದ್ದವರನ್ನೂ ಒಂದೇ ಸಮನೆ ಕಾಣಬೇಕೆನ್ನುವುದು ಯಾವನ್ಯಾಯ ? ಬೇಲಿಗೂ ಬೆಳೆಗೂ ವ್ಯತ್ಯಾಸವೇ ಬೇಡವೆ ? ಕಂದಾಯವನ್ನು ಕೊಡುವ ಕೈ ಅದನ್ನು ಸ್ವೀಕರಿಸುವ ಕೈ, ಎರಡೂ ಸಮವಾಗುತ್ತದೆಯೆ ? ಉಳಿದವರಿಗೂ ಫ್ರಂಟ್‌ಸೀಟ್ ಕೊಡಿಸಲೇ ಬೇಕು ಎಂಬುದೇ ಮಂತ್ರಿಗಳ ಅಭಿಪ್ರಾಯವಾಗಿದ್ದರೆ, ಬಸ್ಸಿನ ಹಿಂದಿನಿಂದಲೇ ಸೀಟು ಗಳನ್ನು ಎಣಿಸುತ್ತಾ ಬಂದು, ಈಗಿನ ಫ್ರಂಟ್‌ಸೀಟಿಗೆ ಲಾಸ್ಟ್‌ಸೀಟ್ ಎಂಬ ಹೆಸರಿಟ್ಟು, ರೆವೆನ್ಯು ಹಾಗೂ, ಪೋಲೀಸ್ ಅಧಿಕಾರಿಗಳನ್ನು ಕಟ್ಟಕಡೆಯ ಸಾಲಿಗೆ ನೂಕಿಬಿಡತಕ್ಕದ್ದು, ಎಂಬ ನಿಯಮವನ್ನು ಮಾಡಬಹುದಲ್ಲಾ !

—ಗಂಗಾಧರ.

—— () ——

" ತನ್ನನ್ನು ಹಗ್ಗ ಅಥವಾ ಸಂಕೋಲೆಗಳಿಂದ ಕಟ್ಟಿ ಮಲಗಿಸಿ ಹೊಡೆದ ಹಾಗೆ ಕನಸು ಕಂಡರೆ, ಅದರ ಫಲ......ಪುತ್ರಲಾಭ " (ಪಂಚಾಂಗದಿಂದ)

* * * *

ಸಂಪಾದನೆಗೆ ಹೊಸ ಮಾರ್ಗಗಳು

1. ರಿಟೈರ್ಡ್ ಆಫಿಸರುಗಳಿಗೆ ಬಡ್ತಿ ಆಸೆ ತೋರಿಸಿ, ಕಮಿಷನ್ ಹೊಡೆಯುವುದು.
2. ಗಂಟೆ ಲೆಕ್ಕದಮೇಲೆ, ಇನ್ನೊಬ್ಬರ ಪರವಾಗಿ ಕ್ಯೂ ನಿಲ್ಲುವುದು.
3. ಹೊಸದಾಗಿ ಬೆಂಗಳೂರಿಗೆ ಬರುವ ಪ್ರಯಾಣಿಕರಿಗೆ ವಾಹನ ಕ್ಷೇತ್ರದಲ್ಲಿ ದುಬಾಷ್ ಸಹಾಯವೊದಗಿಸುವುದು.
4. ಸಂಗೀತಕಚೇರಿಗಳಲ್ಲಿ, ಚಪ್ಪಾಳೆ ಪ್ರಾರಂಭಿಸಿ, ಉತ್ತೇಜನ ಕೊಡುವುದು.
5. ಕನ್ನಡ ಲೇಖಕರಿಗೆ, ಕೃತಿ ಚೌರ್ಯಮಾಡಲು, ಸಲಹೆ ನೀಡುವುದು.
6. ಸಿನಿಮ ಜಾಹಿರಾತುಗಳನ್ನು ಬೀದಿ ಹುಡುಗರು ಹರಿದು ಬಿಸಾಕದಂತೆ ಕಾವಲು ನಿಲ್ಲುವುದು.
7. ಸೌದೆ ಡಿಪೊಗಳಲ್ಲಿ, ತೂಕಮಾಡಲು ನೆರವಾಗುವಂತೆ, ನಿರ್ಧರವಾದ ತೂಕದ ಜನ, ತಕ್ಕಡಿ ಹತ್ತುವುದು.
8. ಹೋಟೆಲುಗಳ ನಡುಮಧ್ಯದ ಟೇಬಲ್ಲಿನಲ್ಲಿ ಕೂತು, ಗಟ್ಟಿಯಾಗಿ ಅಲ್ಲಿಯ ಪದಾರ್ಥಗಳನ್ನು ಹೊಗಳುವುದು
9. ಪರೀಕ್ಷಕರು ತಮಗೆ ಗೊತ್ತಿದೆ ಎಂದು ಡಂಗುರ ಹೊಡೆದು, ಟ್ಯೂಷನ್ ಸಂಪಾದಿಸುವುದು.
10. ತನಗೆ, ಮುಂದೆ ಮಂತ್ರಿಪದವಿ ದೊರೆಯುತ್ತೆ, ಎಂಬ ಭರವಸೆಕೊಟ್ಟು, ಈಗಿನಿಂದಲೇ ಪುಸಲಾಯಿಸುವುದು.
11. ಆರಂಭಭಾಷಣಗಳನ್ನು ಬರೆದು ಕೊಡುವುದು.
12. ಸಿನಿಮ ತಾರೆಯರ ಇಡೀ ಜೀವನದ ವಿವರಗಳನ್ನೆಲ್ಲ ಬೊಗಳುತ್ತೇವೆಂದು ಹೆದರಿಸಿ, ಕಡುಬು ಶೇಖರಿಸುವುದು.
13. ಸೊಸೈಟಿ ಡೈರೆಕ್ಟರಾಗಿ ಚುನಾಯಿಸುತ್ತೇವೆ ಎಂದು ಹೇಳಿ, ಉಮೇದುವಾರರ ಮನೆಗಳಿಗೆ ಓಡಾಡುವುದು.
14. ದೊಡ್ಡದೊಡ್ಡವರ ಬಂಗಲೆಗಳಿಗೆ ಯಾರು ಯಾರು ಬಂದು ಹೋಗುತ್ತಿದ್ದಾರೆ ಎಂದು ಪಟ್ಟಿ ಮಾಡುವುದು.

—— o ——

ಸಾಹಿತ್ಯ ಸಮ್ಮೇಳನ

ಈ ವರ್ಷ ಕೆಳಕಂಡ ಠರಾವುಗಳು ಸಾಹಿತ್ಯಸಮ್ಮೇಳದ ಮುಂದೆ ಮಂಡಿಸಲ್ಪಡುವುವೆಂದೂ, ಉಜ್ವಲ ಭಾಷಣಗಳಿಂದ ಪುಷ್ಟೀಕೃತವಾದ ನಂತರ, ಇವು ಅಂಗೀಕೃತವಾಗುವುವೆಂದು ವದಂತಿ.

(1) ಕರ್ಣಾಟಕ ಕರ್ನಾಟಕ ಕಂನಾಡು ಕನ್ನಡನಾಡು ಎಂದು ಬಗೆಬಗೆಯಾಗಿ ಸಂಬೋಧಿಸಲ್ಪಡುವ ಈ ದೇಶ ಚೂರೀಕೃತವಾಗದಂತೆ, ಅದು ಒಂದಾಗಿ ಮುಂದಾಗಿ ಬೆಳಕಾಗಿ ಥಳಕಾಗಿ ಬಾಳುವಂತೆ ಸಾಹಿತಿಗಳೂ ಪ್ರಕಟನಕಾರರೂ ಸಹಕರಿಸಬೇಕು.

(2) ತರುಣ ಸಾಹಿತಿಗಳೆಲ್ಲರೂ ತಮ್ಮ ತಪ್ಪುದಾರಿಯನ್ನು ತೊರೆದು ಅನೂಚಾನವಾಗಿ ಬೆಳೆದು ಬಂದಿರುವ ಕನ್ನಡತನವನ್ನು ಜಗತ್‌ಕಲ್ಯಾಣಕ್ಕಾಗಿ ಕಾಪಾಡಲೆಂದು ಈ ಸಮ್ಮೇಳನವು ಹಾರೈಸುತ್ತದೆ.

(3) ಏಕೀಕರಣ, ಇಂಗ್ಲೀಕರಣ, ರಷ್ಯೀಕರಣ ಹಿಂದೀಕರಣ ಮುಂತಾದ ಎಲ್ಲ ಚಳುವಳಿಗಳನ್ನೂ ಕಾಂತಾಸಮ್ಮತಿಯಿಂದಲೇ ನೆರವೇರಿಸಬೇಕೆಂದು ಈ ಸಮ್ಮೇಳನ ಉಪದೇಶಿಸುತ್ತದೆ.

(4) ಮೈಸೂರು ಸಂಸ್ಥಾನದ ಬರೆಹಗಾರರು ಸಾಕಷ್ಟು ಮರಾಠಿಯನ್ನು ತಮ್ಮ ಕನ್ನಡದಲ್ಲಿ ಬೆರಸದೆ ಇರುವುದರಿಂದ ಅವರ ಗ್ರಂಥಗಳು ಗಂಡುಗನ್ನಡದವರಿಗೆ ಅರ್ಥವಾಗುತ್ತಿಲ್ಲವೆಂಬ ಕೂಗಿಗೆ ಈ ಸಮ್ಮೇಳನ ದನಿಗೂಡಿಸುತ್ತದೆ. ಅವರ ಇಂಗ್ಲೀಷ್ ಮೋಹಕ್ಕಿಂತ ಉತ್ತರ ಕರ್ನಾಟಕದ ಮರಾಠಿ ಮೋಹವೇ ಹೆಚ್ಚು ಶ್ರೇಯಸ್ಕರವೆಂಬುದನ್ನು ಒತ್ತಿ ಹೇಳುತ್ತದೆ.

(5) ಕನ್ನಡ ಲಿಪಿಯನ್ನು ಸಂಸ್ಕರಿಸಿ, ಒಂದೇ ಅಕ್ಷರದಿಂದ ಹತ್ತಾರು ಶಬ್ದಗಳು ಸೂಚಿತವಾಗುವಂತೆ ಮಾಡುವ ಹೊಸ ಪ್ರಯತ್ನಗಳಿಗೆಲ್ಲ ಈ ಸಮ್ಮೇಳನದ ಬೆಂಬಲವುಂಟು.

(6) ಕನ್ನಡಿಗರೆಲ್ಲ, ಕನ್ನಡಬಲ್ಲವರೊಂದಿಗೆ, ಕನ್ನಡದಲ್ಲೇ ಮಾತನಾಡಲು ಪ್ರಯತ್ನಿಸಬೇಕೆಂದು ಸವಿನಯ ಪ್ರಾರ್ಥಿಸಲಾಗುತ್ತದೆ.

(7) ಕರ್ನಾಟಕ, ಕರ್ನಾಟಕ ಸಂಗೀತಕ್ಕೆ ತವರುಮನೆಯಾಗಿರುವಾಗ, ಲಕ್ಷಾಂತರ ಕನ್ನಡಿಗರು ಹಿಂದುಸ್ತಾನಿ ಸಂಗೀತಕ್ಕೆ ತಲೆತೂಗುತ್ತಿರುವುದನ್ನು ಈ ಸಮ್ಮೇಳನ ಕಂಠಾಘೋಷದಿಂದ ಖಂಡಿಸುತ್ತದೆ.

(8) ಪ್ರತಿಯೊಬ್ಬ ಕನ್ನಡಿಗನೂ ಕನಿಷ್ಠಪಕ್ಷ ಹತ್ತು ಇತರ ಕನ್ನಡಿಗರನ್ನಾದರೂ ಪರಿಷತ್ತಿನ ಸದಸ್ಯರನ್ನಾಗಿ ಸೇರಿಸಲು ಟೊಂಕ ಕಟ್ಟಬೇಕೆಂದು ಈ ಸಮ್ಮೇಳನ ಪ್ರಾರ್ಥಿಸುತ್ತದೆ.

(9) ಕನ್ನಡ ಪುಸ್ತಕಗಳ ಬರವಣಿಗೆ, ಪ್ರಕಟಣೆಗೆ, ಪ್ರಸಾರ ಇವುಗಳ ಅಭಿವೃದ್ಧಿಯ ದೃಷ್ಟಿಯಿಂದ, ಕನ್ನಡಿಗರೆಲ್ಲರೂ ತಮಗೆ ಓದುವುದಕ್ಕೆ ಬರಲಿ ಬರದೆ ಇರಲಿ, ತಮ್ಮ ಹತ್ತಿರ ರೊಕ್ಕವಿರಲಿ, ಇಲ್ಲದಿರಲಿ, ಪುಸ್ತಕಗಳು ಚೆನ್ನಾಗಿರಲಿ, ಇಲ್ಲದಿರಲಿ, ಕಡೆಯಪಕ್ಷ ವರ್ಷವೊಂದಕ್ಕೆ ಸರಾಸರಿ ನಾಲ್ಕುವರೆ ಪುಸ್ತಕಗಳನ್ನಾದರೂ ಕೊಂಡುಕೊಳ್ಳಬೇಕೆಂದು ಈ ಸಮ್ಮೇಳನ ಸೂಚಿಸುತ್ತದೆ (ರಷ್ಯಾ ದೇಶದಲ್ಲಿ ಪ್ರತಿಯೊಬ್ಬನೂ ಸರಾಸರಿ ಆರೂಮುಕ್ಕಾಲು ಗ್ರಂಥಗಳನ್ನು ಕೊಂಡುಕೊಳ್ಳುತ್ತಿರುವನೆಂಬುದು ಗಮನಾರ್ಹ)

(10) ಆಹಾರ, ಆಚ್ಛಾದನ, ಆಲಯ ಮುಂತಾದ ಕರಣಗಳ ಅಭಾವದಿಂದಲೂ, ಕಾಗದ ಲೇಖನಿ ಶಾಯಿ ಮುಂತಾದ ಉಪಕರಣಗಳ ಅಭಾವದಿಂದಲೂ ಕಾವ್ಯವಾಹಿನಿ ಬತ್ತಿ ಹೋಗಿರುವ ಈ ದುರ್ದೆಶೆಯಲ್ಲಿಯೂ, ಪ್ರಾಸಕ್ಕಾಗಿ ಪ್ರಯಾಸಪಟ್ಟು ಪಂಕ್ತಿಗಳನ್ನು ಜೋಡಿಸುತ್ತಿರುವ ಕನ್ನಡ ಕವಿಗಳನ್ನೆಲ್ಲ ಈ ಸಭೆಯು ಅಭಿನಂದಿಸುತ್ತದೆ, ಮತ್ತು; ಅಭಿವಂದಿಸುತ್ತದೆ.

(11) “ಕನ್ನಡ ಕವಿಕುಲಪಿತಾಮಹ” ಎಂಬ ಬಿರುದನ್ನು ಅಲಂಕರಿಸಲು ತಕ್ಕ ಪದ್ಯವೃದ್ಧರು ಹಾಲಿ ಗೋಚರಿಸದಿರುವುದರಿಂದ, ಈ ಸಮಾರಂಭವನ್ನು ಮುಂದು ಹಾಕಲಾಗಿದೆ; ನಮ್ಮ ಮೊಮ್ಮಕ್ಕಳ ಕಾಲದಲ್ಲಾದರೂ ಇದಕ್ಕೆ ತಕ್ಕ ವ್ಯಕ್ತಿ ಕಾಣಿಸಿಕೊಳ್ಳಲಿ, ಎಂದು ಪ್ರಾರ್ಥಿಸುತ್ತದೆ ………ಇತ್ಯಾದಿ, ಇತ್ಯಾದಿ, ಕಾಲಾವಕಾಶ ಇರುವಷ್ಟು.

“ಯಾರಯ್ಯ ನೀನು ?” ಎಂದು ಒಂದು ಕಾಗೆ ಜೀಪನ್ನು ಕೇಳಿತು. “ನಾನು ಮೋಟಾರ್‌ಕಾರು” ಎಂಬ ಉತ್ತರ ಬಂತು. “ನೀನು ಯಾರು ?” ಎಂದು ಜೀಪ್ ಕೇಳಿತು. ಅಗ, ಕಾಗೆ, “ನೀನು ಮೋಟಾರ್‌ಕಾರಾದರೆ, ನಾನು .. ..ಹಂಸ” ಎಂದಿತು.

* * *

ಆತ ; ಪ್ರಿಯೆ ! ನೀನು ನನ್ನನ್ನು ಮದುವೆಯಾಗಲು ಒಪ್ಪುವುದಿಲ್ಲವೆ ?

ಆಕೆ : ಇಲ್ಲ ! ಖಂಡಿತವಾಗಿಯೂ ಇಲ್ಲ.


ಅನಂತರ, ಅವರಿಬ್ಬರೂ, ಸುಖವಾಗಿ ಬದುಕಿ ಬಾಳಿದರು.

* * *

ಇನ್ನೆರಡು ನಾಟಕಗಳು

ಪರ್ವತವಾಣಿ ತೊರೆ ತೊರೆಯಾಗಿ ಹರಿದು ಬರುತ್ತಿರುವುದು ಕನ್ನಡಿಗರ ಸುಯೋಗ ‘ಉಂಡಾಡಿಗುಂಡ’ನಲ್ಲಿ ಕಾಣಬರುವ ಹಾಸ್ಯಲಹರಿಯನ್ನೇ ಶ್ರೀ ಪರ್ವತವಾಣಿಯವರು ‘ಮಿಾನಾ ಮದುವೆ’ ‘ವಿಪರ್ಯಾಸ’ ಎಂಬ ಈ ಎರಡು ಹೊಸ ನಾಟಕಗಳಲ್ಲೂ ತುಂಬಿ ತುಳುಕಿಸಿದಾರೆ. ‘ಮಿಾನಾ ಮದುವೆ’ಯಲ್ಲಿ ಗಂಡು ಹೆತ್ತವರ ಹೆಮ್ಮೆಯನ್ನು ಕಟುವಾಗಿ ಟೀಕಿಸಿ, ನವನಾಗರಿಕತೆಗೆ ಅಸಹ್ಯ ಪಟ್ಟ ಅಜ್ಜಿ ಸುಬ್ಬಕ್ಕನನ್ನು, ಪುರಾತನ ಸಂಸ್ಕೃತಿಯ ತಾತ್ಕಾಲಿಕ ಅವಲಂಬನದಿಂದ, ಮೋಸಮಾಡಿ, ಆಕೆಗೆ ಬುದ್ಧಿ ಕಲಿಸಿ, ಸಮಾಜಸುಧಾರಕರನ್ನೆಲ್ಲ ಎಚ್ಚರಿಸಿದಾರೆ. “ಓದುಗರಿಗೂ ನೋಡುವವರಿಗೂ ಹೀಗಾಗಬಹುದೇ; ಸಾಧ್ಯವೇ, ಎಂದು ತೋರಬಹುದು” ಎಂದು ನಾಟಕಕರ್ತರು “ಮೊದಲ ಮಾತಿನಲ್ಲಿ” ಸಂದೇಹ ಪಟ್ಟಿದಾರೆ. ಆದರೆ. ಓದುವಾಗಲೂ ನೋಡುವಾಗಲೂ, ಹಾಗೆ ತೋರುವುದೇ ಇಲ್ಲ. ಕಥೆ ನಾಗಾಲೋಟದಿಂದ ನಗೆಯ ಕುದುರೆಯನ್ನೇರಿ ಬಿರುಬರನೆ ಮನದ ಮುಂದೆ ಸಾಗುತ್ತಿರುವಾಗ, ಅಂತಹ ಯೋಚನೆಗಳಿಗೆ ಅವಕಾಶವೇ ಇಲ್ಲ. ಪುಸ್ತಕ ಕೆಳಗಿಟ್ಟಮೇಲೆ, ಅಥವಾ, ನಾಟಕ ನೋಡಿಕೊಂಡು, ಮನೆಗೆ ಹಿಂತಿರುಗುವಾಗ, “ಹಳೇ ಸಂಪ್ರದಾಯದ ಮೇಲಿನ ಮಮತೆಯ ಪ್ರತೀಕವಾಗಿ ಮುಂಡನ ಮಾಡಿಕೊಂಡ ಮುದಿವಿಧವೆಯನ್ನೇ ರಂಗಸ್ಥಳಕ್ಕೆ ತರಬೇಕೆ?” “ಅಂಥ ಮುದುಕಿ ದಿವಾಕ್ ಮುಂತಾದ ಪದಗಳನ್ನು ಪಯೋಗಿಸುತ್ತಾಳೆಯೇ?” “ಬಹುಮುಖ್ಯಪಾತ್ರವಾದ ಕಿಟ್ಟು ಹೆಸರನ್ನೇ ಪಾತ್ರಗಳ ಪಟ್ಟಿಯಲ್ಲಿ ಏಕೆ ಸೇರಿಸಲಿಲ್ಲವೋ?” “ಕುತ್ತಾಲದ ಸೀರೆ ಉಡುಸಿದ ಮಾತ್ರಕ್ಕೆ ತಮ್ಮ ಹುಡುಗಿಯನ್ನೇ ತಂದೆ ಗುರುತು ಹಿಡಿಯಲಾರನೆ?” “ಇಲ್ಲ, ಅಂತ ಇವತ್ಗೇನೋ ಆಗಿದೆ, ಇಲ್ಲಿ ಪರಮೇಶ್ವರನ ವ್ಯಾಪಾರ ವಿಚಿತ್ರ—ಎಂದು ಜೋಯಿಸರು ನುಡಿಯೋದು ಕಥೆಯ ಗುಟ್ಟನ್ನೇ ಅರ್ಧದಲ್ಲೇ ರಟ್ಟುಮಾಡಿದಹಾಗಾಗಲಿಲ್ಲವೆ?” “ಯಾರೇ ಆಗಲಿ! ತಾನು ಹೇಳಿದ ಮಾತುಗಳನ್ನೆಲ್ಲ ಒಂದೊಂದಾಗಿ ಆರಿಸಿ-ತನ್ನ ಮುಖದ ಮೇಲಕ್ಕೆ ಒಬ್ಬರು ಎಸೆಯುತ್ತಿದ್ದರೆ, ಕೊಂಚವೂ ಕೋಪ ತೋರಿಸದೆ,—ನನ್ನ ಕಾಲ ಎಲ್ಲಾ ಆಗ್ಹೋಯ್ತು—ಎಂದು ಕುಸಿದು ಬಿದ್ದು, ತಪ್ಪನ್ನೊಪ್ಪಿಕೊಳ್ಳುತ್ತಾರೆಯೆ?,” ಎಂದು ಮುಂತಾಗಿ ಯೋಚನೆಗಳು ಬರಬಹುದು. ಆದರೆ, ಅವೊಂದರಿಂದಲೂ ನಾಟಕದ ಸವಿಗೆ ಹುಳಿ ಬೆರೆಯುವುದಿಲ್ಲ, ಬ್ರಾಹ್ಮಣ ಸಮಾಜದಲ್ಲಿ ಹರಡಿ ಹದಗೆಡಿಸುತ್ತಿರುವ, ಅವರನ್ನನುಸರಿಸುತ್ತಿರುವ ಇತರ ಉತ್ತಮ ಜಾತಿಯವರಲ್ಲೂ ವ್ಯಾಪಿಸುತ್ತಿರುವ, ವರಪುರುಷಾಮೃಗಗಳ ಅಹಂಕಾರ ರೋಗಕ್ಕೆ ‘ಮಿಾನಾ ಮದುವೆ’ ಒಂದು ಒಳ್ಳೇ ಟಾನಿಕ್. ಈ ಗ್ರಂಥದ ಬೆಲೆ

ಹತ್ತು ಆಣೆ. ಪ್ರಕಟಿಸಿರುವವರು. ಛಾಯಾ ಪ್ರಕಟನಾಲಯದವರು, ಬೆಂಗಳೂರು. ಇವೇ ಆಲಯದವರು ಹೊರಬೀಳಿಸಿರುವ ಮತ್ತೊಂದು ಪರ್ವತವಾಣೀಕೃತ ಹಾಸ್ಯನಾಟಕ "ವಿಪರ್ಯಾಸ" ಅದರ ಬೆಲೆ ಎಂಟಾಣೆ, ಎರಡಾಣೆ ಕಡಮೆ. ಆದರೂ, 'ವಿಮಾನಾಮದುವೆ' ಗಿಂತ ಒಂದು ತೂಕ ಹೆಚ್ಚು; ನಾಟಕೀಯತೆ ಬಲುರಮ್ಯ; ಬರೀ ಹೊಟ್ಟೆಯಲ್ಲಿ ನಾಟಕ ನೋಡಲು ಹೋದವರಿಗೆ ಖಂಡಿತವಾಗಿಯೂ ಪಕ್ಕೆ ಎಲುಬುಗಳು ಮುರಿದು ಹೋಗುತ್ತವೆ. ಒಬ್ಬನೇ ನಟ ಡಿ. ಇ. ಓ. ಆಗಿಯೂ, ಇಸ್ಕೂಲ್ ಮಾಸ್ಟರಾಗಿಯೂ, ಹಾಸು ಹೊಕ್ಕಿನಂತೆ ನಾಟಕವನ್ನು ನೆಯ್ಯುತ್ತಾ ಹೋಗುತ್ತಾನೆ; ಇದರಲ್ಲಿ ಬರುವ ಕನ್ನಡ ಪಂಡಿತರನ್ನಂತೂ ನಾವು ಎಂದೆಂದಿಗೂ ಮರೆಯುವಂತಿಲ್ಲ. ಹುಚ್ಚಾಸ್ಪತ್ರೆ ದೃಶ್ಯ ಹೃದಯವಿದ್ರಾವಕ. ಒಟ್ಟಿನಲ್ಲಿ, 'ವಿಪರ್ಯಾಸ' ಒಂದು ಉತ್ತಮ ಕಲಾಕೃತಿ. ಇದು ಉಪಚಾರದ ಮಾತಲ್ಲವೆಂದು ಓದುಗರೂ ನೋಟಕರೂ ಒಪ್ಪಿಕೊಳ್ಳುತ್ತಾರೆ.



ಅಕ್ಕಿ ರೇಷನ್ ನಂಗಿನ್ನೂ ತಪ್ಪಿಲ್ಲ ಅಂತ ಕಾಣುತ್ತೆ—

—ಭಿಕ್ಷಕ್ಕೆ ಬಂದುಬಿಟ್ಟೆ ಕೈಬೀಸಿಕೊಂಡು.

ಮುಖ ಷೇವನ

॥ **ಷಂಕಲ್ಪ** ॥ **ಶುಭೇ ಶೋಭನೇ ಮುಹೂರ್ತೇ, ಆದ್ಯಕ್ರೈಸ್ತಣಃ, ಟ್ವೆಂಟೀಯತ್ ಸೆಂಚುರ್ಯಾಂ,** ಶ್ವೇತವರಾಹ ದೌಲತ್ತ್ರೇ, **ಬೇರ್ಟ** ವೈಸ್ರಾಯಾಂತರೇ, ಕಲಿಯುಗೇ, ಪ್ರಥಮ ಪಾದೆ, ನಂದೂ ದ್ವೀಪೇ, ಭರತ ವರ್ಷೇ, ದ್ವೇಖಂಡೆ, ಅಸ್ಮಿನ್ ವರ್ತಮಾನೇ, ಜನವರ್ಯಾದಿ ದ್ವಾದಶ ಮಾಸಾನಾಂ ಮಧ್ಯೆ, ಏಪ್ರಿಲ್ ಮಾಸ, ಕೃಷ್ಣ ಪಕ್ಷೆ, ಅಮಾವಸ್ಯಾಯಾಂ, ಶುಭತಿಥೌ, ಮಮ ಸರ್ವಕಾರ್ಯ ಸಾಧನಾರ್ಥಂ, ನಿತ್ಯ ಕರ್ಮಾಂಗಂ, ಮುಖ ಷೇವನಂ ಕರಿಷ್ಯೆ.

(ಎಲ್ಲಾ ಸಾಮಗ್ರಿಗಳನ್ನೂ ಮುಂದೆ ಸಿದ್ಧಪಡಿಸಿಟ್ಟುಕೊಂಡು ಕೂತುಕೊಂಡು—)

ಶ್ಲೋ॥ ಹೇರಾನಾಂ ಹೋಗಲಾರ್ಥಾರ್ಯ ಸೌಂದರ್ಯಾಗಮನಾಯಚ ।
ಮುಖ ಷೇವನಮಹಂ ಕರ್ತುಂ ರಡಿ ಭೂತೋಸ್ಮಿ ಹೇಗುರೋ ॥

—**ವಿ. ಸತ್ಯನಾರಾಯಣ.**

ಸಂಕ್ರಾಂತಿಪುರುಷ

ಈ ವರ್ಷದ ಸಂಕ್ರಾಂತಿ ಪುರುಷನ ಹೆಸರು ಮಂಡಾಕಿನಿ; ಡಾಕಿನಿ ಶಬ್ದದಿಂದ, ಆತನಲ್ಲಿ ಸ್ತ್ರೀಪುರುಷ ಸ್ವಭಾವಗಳೆರಡೂ ಮಿಲಿತವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆತನಿಗೆ ಮೂರು ತಲೆಗಳಿರುವುದರಿಂದ, ರಾಜಾಸ್ಥಾನ, ಪಾಕಿಸ್ಥಾನ, ಹಿಂದುಸ್ಥಾನ, ಅಥವಾ, ಎ. ಬಿ. ಸಿ ತಲೆಗಳು ಸಿದ್ಧ. ಮೂರು ತಲೆಗಳಿದ್ದರೂ, ಎರಡು ಮುಖಗಳೇ. ಒಂದು, ಆಕಾಶದ ಕಡೆ, ಒಂದು ಪಾತಾಳದ ಕಡೆ. ಆತನಿಗೆ ಜೋಲಾಡುವ ಕಿವಿಗಳಂತೆ. ಅಂದರೆ, ಬುದ್ಧಿಯ ಮಟ್ಟ ಎಷ್ಟೆಂದು ವಾಚಕರೇ ಊಹಿಸಿಕೊಳ್ಳಬಹುದಾಗಿದೆ. ಆತ ಸ್ನಾನಮಾಡುವುದು ಸರಸ್ವತೀನದಿಯಲ್ಲಾದ್ದರಿಂದ ತನ್ನದೀಶೋಷಣವೇ ಫಲ. ಅಂದಮೇಲೆ, ಸಾಹಿತಿಗಳು ಈವರೆಗಿನ ಹಾಗೆಯೇ ಮುಂದಿನ ವರ್ಷವೂ ಕೇವಲ ಶುಷ್ಕಗ್ರಂಥಗಳನ್ನೇ ಬರೆದು ಬರಡುಮಾಡುತ್ತಾರೆ. ಮುತ್ತಿನ ಛತ್ರಿಯನ್ನುಪಯೋಗಿಸುವುದರಿಂದ, ಮುತ್ತಿನ ನಾಶವೇ ಫಲವೆಂದಮೇಲೆ ಸಾಂಸಾರಿಕರ ಗತಿ ಏನು ? ಪೂರ್ವ ದೇಶವಾಸಿಗಳಿಗೂ (ಇಂಡೊ ಚೀಣ ಇತ್ಯಾದಿ) ಬ್ರಾಹ್ಮಣರಿಗೂ ದಶಮೂಲಗಳಿಗೂ ರಾಜರಿಗೂ ಅರಿಷ್ಟ ಒದಗುವುದಂತೆ. ವಾರಫಲ ವಾಯುಪೀಡನವಾದ್ದರಿಂದ ಗಾಳಿ ಬಂದಾಗ ತೂರಿಕೊಳ್ಳುವರ ಸಂಖ್ಯೆ ಹೆಚ್ಚುವುದಂತೆ. **ಯೋಗಫಲ, ದುರ್ಭಿಕ್ಷ; ಅಂಥ ಯೋಗ ಇರುವವರಿಗೆ.**

ತುಂಬು ಬಂದಿತ್ತsss

— o —

(ಬೇಂದ್ರೆಯವರ ಕ್ಷಮೆ ಕೋರಿ)

[ಪಲ್ಯದಲ್ಲಿ ಬದನೇಕಾಯಿಯ ತುಂಬು ಬಂದಾಗ ಅಣ್ಣನಿಗೆ ಕಾವ್ಯಾವೇಶ ಬಂದು ಹಾಡಿದುದು]

ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್
ತುಂಬು ಬಂದಿತ್ತ, ತಂಗಿ
ತುಂಬು ಬಂದಿತ್ತು ॥ ಪಲ್ಲ ॥


ದಂಟಿಗಿಂತಾ ದಪ್ಪಗಿತ್ತ
ಕಂಟಿಗಿಂತಾ ಚೂಪಗಿತ್ತ
ಪಲ್ಯದ ಕೂಡಾ ಹಲ್ಲಾಗ ಹೊಕ್ಕು
ಗುಲ್ಲು ಮಾಡಿತ್ತss
ಮೈಯೊಳಗಿರುವಾ ಮೂಲಿಮೂಲಿಗೂ
ಮುಳ್ಳು ಮೂಡಿತ್ತ
ಅಡಿಮುಡಿಯೆಲ್ಲಾ ಒಂದೇ ನಡುತ
ಗುಡುಗುಡು ಓಡಿತ್ತ, ತಂಗಿ
ತುಂಬು ಬಂದಿತ್ತು ॥ ತುಮ್ ..

ಕೊಪ್ಪಕ್ಕಿಂತ ಬಿರುಸು ಇತ್ತ
ಸೊಪ್ಪಿಗಿಂತ ವಿರಸವಿತ್ತ
ಕುರುಡು ನೊಣಾ ಹಿಡುಕೊಂಡ ಹಾಗ
ಬಾಯಲಿ ನಟ್ಟಿತ್ತss

ವರ್ಮದ ಮಾತು ಆಡಿಧಾಂಗ
ಮರ್ಮತ ಮುಟ್ಟಿತ್ತ
ನಾಲಿಗೆಲ್ಲಾ ಚುಟುಚುಟು ಎಂದು
ಜೀವ ನೊಂದಿತ್ತ, ತಂಗಿ
ತುಂಬು ಬಂದಿತ್ತು ॥ ತುಮ್...

ಕಪ್ಪೆಗಿಂತಾ ಕಪ್ಪಗಿತ್ತ
ಸಿಪ್ಪೆಗಿಂತಾ ಸಪ್ಪಗಿತ್ತ
ಬೆಕ್ಕು ಜೋಳನು ನುಂಗಿದ್ದನ್ನು
ನೆಪ್ಪಿಗೆ ತರತಿತ್ತs
ಸಣ್ಣ ಬೆಳಕಿನ್ಯಾಗ ಉಣ್ಣುವಾಗ
ಬಾಯ ಸೇರಿತ್ತs
ಗುಂಗಿನ್ಯಾಗ ನುಂಗುವಾಗ
ಅಂಗಳಕೇರಿತ್ತs—..........ಈಗ,
ಒಳಗ ಜಾರಿತ್ತs, ತಂಗಿ
ತುಂಬು ಬಂದಿತು ॥ ತುಮ್ ತುಮ್....

—ಅಂಬಿಕಾಪ್ರಪೌತ್ರಧತ್ತೂರಿದೇವ.




ಡಾಕ್ಟರ್ ಸಾಬ್—ಕನ್‌ಜೋರಿ ಹೋಗೋದಕ್ಕೆ ಟಾನಿಕ್ ದವಾ ಬರಕೊಡ್ರೀ—

ನಡೆದ ಸಂಗತಿ

ರೈಲಿನಲ್ಲಿ ಇಬ್ಬರು ಪೋಸ್ಟಲ್ ಟೆಲಿಗ್ರಾಫಿಕ್ ಪರೀಕ್ಷೆ ಮುಗಿಸಿಕೊಂಡು ತಮ್ಮ ಊರಿಗೆ ಪ್ರಯಾಣಮಾಡುತ್ತಿದ್ದರು. ಅದೇ ಗಾಡಿಯಲ್ಲಿ ಒಬ್ಬ ವೃದ್ಧನೂ ಮತ್ತು ಒಬ್ಬ ರೂಪವತಿಯಾದ ಯುವತಿಯೂ ಪ್ರಯಾಣಮಾಡುತ್ತಿದ್ದರು. ಆ ಇಬ್ಬರು ವಿದ್ಯಾರ್ಥಿಗಳೂ ಕೈಯಲ್ಲಿ ಒಂದೊಂದು ಪೆನ್ಸಿಲ್ ತೆಗೆದುಕೊಂಡು ಆ ರೂಪವತಿಯಾದ ಹುಡುಗಿಯ ವಿಚಾರವಾಗಿ—(ಟೆಲಿಗ್ರಾಮ್ ಕೊಡಿಸುವ ಶಬ್ದದಲ್ಲಿ ಅಂದರೆ ಟಕ್ಕ-ಟಕ್ಕ-ಕಟ್ಟ-ಕಡ ವಗೈರೆ) ಪರಿಹಾಸ್ಯಮಾಡುತ್ತಿದ್ದರು. ಅವರ ಅಭಿಪ್ರಾಯ ಈರೀತಿ ಇತ್ತು. ಆ ಮುದುಕನಿಗೇಕೆ ಆ ಹುಡುಗಿ, ನಮಗಾದರೂ ಮದುವೆ ಮಾಡಬಾರದೇ ಎಂದು—! ಆ ವೃದ್ಧನೂ ಕೂಡ ಒಬ್ಬ ರಿಟೈರ್ಡ್ ಪೋಸ್ಟ್‌ಮಾಸ್ತರು. ವಿದ್ಯಾರ್ಥಿಗಳ ಇಂಗಿತವನ್ನರಿತ ಆ ವೃದ್ಧನು, ತಾನೂ ಒಂದು ಪೆನ್ಸಿಲ್ಲಿನಲ್ಲಿ ಟೆಲಿಗ್ರಾಮ್ ಪದಗಳನ್ನು ಬಡಿದು, ಈರೀತಿ ವ್ಯಕ್ತಪಡಿಸಿದ. ಅಯ್ಯೋ ಪೋಲಿಗಳ! ಆ ಯುವತಿ ನನ್ನ ಹೆಂಡತಿಯಲ್ಲ. ನನ್ನ ಮಗಳು. ನಿಮಗೆ ಬೇರೆ ಕೆಲಸವಿಲ್ಲವೇ! ವಗೈರೆ, ಬೈದನು. ಮುಂದಿನ ಸ್ಟೇಷನ್ನಿನಲ್ಲಿ ಆ ವಿದ್ಯಾರ್ಥಿಗಳು ಆ ಗಾಡಿ ಬಿಟ್ಟು ಬೇರೇ ಗಾಡಿ ಹತ್ತಿದರು.

ಹೆಚ್. ಎಸ್. ರಾಮಕೃಷ್ಣ ಐಯ್ಯಂಗಾರ್



ನಮಗೆ ಈಗ ಬೇಕಾದ್ದು - ಶಾಂತಿ - ಶಾಂತಿ - ಶಾಂತಿ.

ಮದ್ರಾಸ್ ಗಾದೆಗಳು

ತೆಲುಗು ತಮಿಳು ಜಗಳದಲ್ಲಿ –
ಇದ್ದೊಬ್ಬ ಕನ್ನಡ ಮಂತ್ರಿ ಬಡವಾದ

ರೀತಿ ತೋರಿಸುಕ್ಕೆ ಆತನ್ನ ಕರೆಸಿದರೆ –
ಆತ ಅರ್ಥವೇ ಆಗಲಿಲ್ಲ ಎಂದನಂತೆ.

ಮೊದಾ ಮೊದಲಿದ್ದೋರೇ ವಾಸಿ –
ರೇಗಿದರೆ ಎದ್ದು ಕೆಲಸಮಾಡುತ್ತಿದ್ದರು.

ರೆಡ್ಡಿಯಾರ್‍ರಿಗೆ ರಾಜ್ಯ ಆದರೆ –
ರಾಜಾಜೀದೇ ಮೊದಲ ತಂತಿಯಂತೆ.

ಹಿಂದಲ್ಲಾ ಮಂತ್ರಿಮಂಡಳಕ್ಕೆ –
ಸಂಧಿ ಸಂಧಿಗೂ ಬೇನೆ

ಮಂತ್ರಿಮೇಲೆ ತಂತ್ರಹೂಡಿದರೆ –
ಚೀಫ್ ಸೆಕ್ರೆಟರಿಗೆ ಸುಗ್ಗಿಯಂತೆ.

ನವ ಮಂತ್ರಿಮಂಡಲದಲ್ಲಿ ನಾರಿಯರೆಲ್ಲಿ ಎಂದರೆ
ನಾರಿ ಕೇರಳದಿಂದ ಫಲಿಸಾಳು ಎನ್ನುವುದೇ?

ದನಿಗೂಡಿದರೆ ಹಳ್ಳ –
[illegible]-ದನಿ ಕೂಡಿದರೆ “ ಓ ಮುಂದೂರು ”

ದುರ್ಭಿಕ್ಷದಲ್ಲಿ ಅಧಿಕಮೋಸ –
ಇಬ್ಬರು ಡಾಕ್ಟರಲ್ಲಿ ಒಬ್ಬ ವೈದ್ಯನೇ ಅಲ್ಲವಂತೆ.

ರೆಡ್ಡೀಗೆ ರಾಜ್ಯವಾದರೂ ಕೂಡ –
ಬೀಸುಕ್ಕೆ ರಾಗಿ ಮಾತ್ರ ಇಲ್ಲವಂತೆ

ಕಲಿಗನ್ನಡ ಸ್ಪರ್ಧೆ

(ಅಪೂರ್ಣಪದದಲ್ಲಿ ಖಾಲಿಜಾಗವನ್ನು ಭರ್ತಿಸಿ)

1. ಇಂಥರಿಂ ಮಂತ್ರಿಮಂಡಲಕ್ಕೆ ಮಂಡಲ ಸೇರಿಕೊಂಡಮೇಲೆ ಹರಿಜನರೂ ಕೂಡ '—ಾಕೀಸ್ಥಾನಂ' ಅಂತ ಕೂಗಿಕೊಂಡು ದೇವಸ್ಥಾನಗಳಿಗೆ ಕೋಟಿ ಕೋಟಿ ಮೊದಲಾಗಿ ನುಗ್ಗುತ್ತಿದಾರಂತೆ.

2. ಕೊಡೋ ಐದು ಗಜ ಬಟ್ಟೆ ಹೊಲಿಸಿಕೊಳ್ಳುವುದಕ್ಕೂ ಆತ ಅಳುತ್ತಿರುವುದನ್ನು ನೋಡಿದರೆ, ಬರಬರುತ್ತ ಶುದ್ಧ '—ೋಮಟೇಶ್ವರ'ನಾಗುತ್ತಿರುವಂತೆ ತೋರುತ್ತೆ.

3. ಈಚಿಗೆ ಡಿಪೋಗಳಿಗೆ ಬಂದಿರುವ ಸೀಮೆ ಆಲೂಗಡ್ಡೆಯ ಚಿಪ್‌ಉ ಹಸೀ ಆಲೂಗಡ್ಡೆಯನ್ನು ಈ ರೀತಿ ಮೂದಲಿಸಿತಂತೆ :— "—ಟ್ಟರೇ ಸಗಣಿಯಾದೆ, ತಟ್ಟಿದರೆ (ಸೊಗಸಾದ) ಕುರುಳಾದೆ, ಸುಟ್ಟರೇ ಹೊಸಲಿಗೆ ರಂಗೋಲಿಯಾದೆ........ನೀನ್ಯಾತಕಾದೆಯೋ"........ಇತ್ಯಾದಿ........

4. ಹೆಣ್ಣೂರು ಮಠದ ಶ್ರೀ ಸ್ವಾಮಿಗಳವರು "—ಪತಪಾದಿ" ನಿತ್ಯಕರ್ಮಗಳನ್ನು ತೀರಿಸಿಕೊಂಡು ಮೆರವಣಿಗೆಯಲ್ಲಿ ದಯಮಾಡಿಸಿದರು.

5. 'ಈ "—ಣಜಂಭ" ಎಲ್ಲೀವರೆಗೆ ನೋಡೋಣ' ಅಂತ ಒಬ್ಬ ಬಡಮೇಸ್ತ್ರು ಆಹಾರ ಇಲಾಖೆಯವರೊಬ್ಬರಿಗೆ ದಬಾಯ್ಸಿದರಂತೆ.

6. ....ಮೇಡಂಗಳಿಂದ ನಾಟಕ ಪ್ರದರ್ಶನವಾದ ನಂತರ ಸ್ಕೂಲಿನ ಆವರಣದಲ್ಲೇ ಮಂತ್ರಿಗಳಿಗೆ "—ಂಗಳಾರತಿ" ನಡೆಯಿತು.

7. ಹಾಲಿ ಸರ್ಕಾರದ ಆಡಳಿತವು 'ತುಂಬಾ ನ್ಯಾಯಧ—ರ್ಗಳಿಂದ ತುಂಬಿ ತುಳುಕಾಡುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಕಲಿಗನ್ನಡಸ್ಪರ್ಧೆ :—ಸರಿಯಾದ ಉತ್ತರ.

1. ಮು 2. ಕೆ 3 ಕೆ 4. ನೆ 5. ಹ 6. ಹೆ 7. ಪ.

—ಟೀಯಸ್ಸಾರ್ರಾವ್